# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2018-20
Date of Posting, Kodialbail Post Office
on 12th of every Month

ಸಂಪುಟ-9 Reg. No. : KARBIL/2005/16123 ನವಂಬರ್ - 2020 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ - 11 ಪ್ರಕಟಣೆ : 10-11-2020

● e-mail : jnanashakthisss@gmail.com ● whatsapp : 7795116598 ● Mobile : 9343361618




## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹ ಸಂದೇಶ

ಹಿಂದಿನ ಜನ್ಮದಲ್ಲಿ ಮಾಡಿರುವ ಅನೇಕ ಪುಣ್ಯಕರ್ಮಗಳ ಫಲವಾಗಿ ಮನುಷ್ಯ ಜನ್ಮವು ಲಭ್ಯವಾಗಿರುತ್ತದೆ. ಆದ್ದರಿಂದ ಈಗ ದೊರಕಿರುವ ಮಾನವ ಜನ್ಮವನ್ನು ವ್ಯರ್ಥಮಾಡಿಕೊಳ್ಳದೆ ಇರುವುದು ಎಲ್ಲರ ಮುಖ್ಯ ಕರ್ತವ್ಯವಾಗಿರುತ್ತದೆ. ವಿವೇಕವನ್ನು ಆಶ್ರಯಿಸಿ ಪುಣ್ಯ ಹಾಗೂ ಪಾಪಗಳ ನಡುವಿನ ವ್ಯತ್ಯಾಸವನ್ನು ಅರಿತುಕೊಂಡು ಸರ್ವದಾ ಪುಣ್ಯಪ್ರದವಾದ ಕರ್ಮಗಳಲ್ಲಿಯೇ ನಿರತರಾಗಿರಬೇಕು. ಕುಟುಂಬದ ಹಿರಿಯರಿಂದಲೂ, ಶಾಸ್ತ್ರಗಳಿಂದಲೂ ಹಾಗೂ ಸ್ವಂತ ಅನುಭವದಿಂದಲೂ ಇದನ್ನು ಅರಿತುಕೊಳ್ಳಬಹುದು.

ಪ್ರಾಣಿಗಳಿಗೆ ವಿವೇಕ, ವಿವೇಚನೆ ಇರುವುದಿಲ್ಲ. ಅವು ತಮ್ಮ ಇಚ್ಛಾನುಸಾರವಾಗಿ ಬದುಕಿ ತೊಂದರೆಯನ್ನು ಅನುಭವಿಸುತ್ತವೆ. ಆದರೆ, ಮನುಷ್ಯನಾದರೋ ವಿವೇಕವನ್ನು ಆಶ್ರಯಿಸಿ ಮನಸ್ಸನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು. ನಿಯಂತ್ರಣದಲ್ಲಿ ಇಲ್ಲದ ಮನಸ್ಸು ಅನಪೇಕ್ಷಿತವಾದ ಆಸೆಗಳನ್ನು ಪ್ರಚೋದಿಸಿ ಮನುಷ್ಯನನ್ನು ಬಿಡಿಸಿಕೊಳ್ಳಲಾರದ ಬಂಧನದಲ್ಲಿ ಸಿಲುಕಿಸುತ್ತದೆ. ಕಡೆಗೆ ಅವನು ಅತ್ಯಂತ ಹಿಂಸಾಮಯವಾದ ತೊಂದರೆಗಳಿಗೆ ಈಡಾಗುತ್ತಾನೆ.

ಆದ್ದರಿಂದ, ಮನುಷ್ಯನು ತನ್ನ ವಿವೇಕವನ್ನು ಸರ್ವಥಾ ಕಳೆದುಕೊಳ್ಳಬಾರದು. ಮನಸ್ಸು ಮತ್ತು ಇಂದ್ರಿಯಗಳನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತಾ ಶುದ್ಧವಾಗಿ ಇಟ್ಟುಕೊಳ್ಳಬೇಕು, ನಮ್ಮ ಶಾಸ್ತ್ರಗಳೂ ಇದನ್ನೇ ಉಪದೇಶಿಸುತ್ತವೆ.

**ಮನೋಗತಿಂ ನ ವಿಸೃಜೇಜ್ಜಿತಪ್ರಾಣೋ ಜಿತೇಂದ್ರಯಃ ।**
**ಸತ್ವಸಂಪನ್ನಯಾ ಬುದ್ಧ್ಯಾ ಮನ ಆತ್ಮವಶಂ ನಯೇತ್ ॥**

ಮನಸ್ಸನ್ನು ಸ್ವೇಚ್ಛೆಯಾಗಿ ಹರಿಯಲು ಬಿಡಬಾರದು. ಇಂದ್ರಿಯಗಳನ್ನು ನಿಯಂತ್ರಿಸಿ, ಸತ್ವಗುಣದಿಂದ ಮನಸ್ಸನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕು. ಸತ್ವಗುಣದಿಂದ ಕೂಡಿದವನು ಮನಸ್ಸನ್ನು ನಿಯಂತ್ರಿಸಿಕೊಳ್ಳಲು ಶಕ್ತನಾಗಿರುತ್ತಾನೆ. ಸಾತ್ವಿಕವಾದ ಮನಸ್ಸು ಮನುಷ್ಯನನ್ನು ಮೋಕ್ಷದ ಹಾದಿಯಲ್ಲಿ ಮುನ್ನಡೆಸುತ್ತದೆ. ಇದರಿಂದ ಹೆಚ್ಚಿನ ಶ್ರೇಯಸ್ಸು ಲಭ್ಯವಾಗುತ್ತದೆ.

**ಕೃಪೆ : 'ಶ್ರೀ ಶಂಕರ ಕೃಪಾ'**

---

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು**

ಸಮಾಜ ಬಾಂಧವರೇ,

### ಶ್ರೀ ಸಭಾದ ವಾರ್ಷಿಕೋತ್ಸವವು

**ತಾರೀಕು 29-11-2020ನೇ ಆದಿತ್ಯವಾರದಂದು**

ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

**ಅಧ್ಯಕ್ಷರು ಮತ್ತು ಸರ್ವ ಸದಸ್ಯರು**

### ಕಾರ್ಯಕ್ರಮಗಳು

ಬೆಳಗ್ಗೆ ಗಂಟೆ 9-00ಕ್ಕೆ : **ಉಪಾಹಾರ**

ಬೆಳಗ್ಗೆ ಗಂಟೆ 10-00ರಿಂದ : **ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು** ಇದರ **ಮಹಾಸಭೆ**

ಬೆಳಗ್ಗೆ ಗಂಟೆ 11-00ರಿಂದ : **ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಮಂಗಳೂರು** ಇದರ **ಮಹಾಸಭೆ**

ಮಧ್ಯಾಹ್ನ ಗಂಟೆ 12-30 : **ಭೋಜನ**

ಅಪರಾಹ್ನ ಗಂಟೆ 2-00ಕ್ಕೆ : **ಪ್ರತಿಭಾ ಪುರಸ್ಕಾರ**

**ದಿ। ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ** ಇವರಿಂದ

---

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಸ್ಮಾರಕ ಸಾಲ ವಿದ್ಯಾರ್ಥಿ ವೇತನ ನಿಧಿಗೆ ಪೂರಕ ಕೊಡುಗೆ

ಕದ್ರಿಯ ಶ್ರೀಮತಿ ರತ್ನ ಶ್ರೀಧರ್ ರಾವ್ ಇವರು ತಮ್ಮ ಮಾತಾಪಿತರಾದ ಕೀರ್ತಿಶೇಷ ಪಾರ್ವತಿಯಮ್ಮ ಮತ್ತು ಬೊಂಡಂತ್ತಿಲ ನರಸಪ್ಪಯ್ಯ ಅವರ ನೆನಪಿನಲ್ಲಿ ಈಗಾಗಲೇ ಸ್ಥಾಪಿಸಿದ್ದ **'ಸ್ಮಾರಕ ಸಾಲ ವಿದ್ಯಾರ್ಥಿ ವೇತನ ನಿಧಿ'** ಎರಡು ಲಕ್ಷದ (2,00,000/–) ಮೊತ್ತಕ್ಕೆ ಪೂರಕವಾಗಿ ಮತ್ತೆ ಒಂದು ಲಕ್ಷ (1,00,000/–) ದೇಣಿಗೆಯನ್ನಿತ್ತು ಒಟ್ಟು ಮೊತ್ತವನ್ನು ಮೂರು ಲಕ್ಷಕ್ಕೆ (3,00,000/–) ವೃದ್ಧಿಸುವುದರ ಮೂಲಕ ನಮ್ಮ ಸಮಾಜಕ್ಕೆ ಒಂದು ಶ್ರೇಷ್ಠ ಮಾದರಿಯಾಗಿದ್ದಾರೆ.

ಭಗವಂತನು ಅವರಿಗೂ ಅವರ ಕುಟುಂಬಕ್ಕೂ ಆಯುರಾರೋಗ್ಯವನ್ನಿತ್ತು ಆಶೀರ್ವದಿಸಲಿ ಮತ್ತು ಅವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಸೇವೆ ದೊರೆಯಲೆಂದು ಪ್ರಾರ್ಥಿಸುತ್ತೇವೆ.

**ಕರುಣ್ ರಾವ್ ಬೆಳ್ಳೆ**
**ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)**

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್, ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ, ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ, ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು : **ಹರ್ಷಕುಮಾರ್ ಕೇದಿಗೆ**


## ಆದಿ ಶಂಕರರ ಕಾಲ ಕ್ರಿಸ್ತ ಪೂರ್ವದಲ್ಲಿ



ಶಂಕರ ವಿಜಯ (ದಿಗ್ವಿಜಯ)ಗಳು ಆದಿಶಂಕರರ ಜೀವನ ಚರಿತ್ರೆಯನ್ನು ವಸ್ತುವಾಗಿ ಇಟ್ಟುಕೊಂಡು ರಚಿಸಿರುವ ಕೃತಿಗಳು. ಕಂಚಿ, ಶೃಂಗೇರಿ, ದ್ವಾರಕಾ, ಪುರಿ ಮತ್ತು ಬದರಿಯಲ್ಲಿರುವ ಶಂಕರ ಮಠಗಳ ಪೀಠಾಧಿಪತಿಗಳು, ಕಾಲಕಾಲಕ್ಕೆ ಇವುಗಳನ್ನು ರಚಿಸಿದ್ದಾರೆ. ಅನೇಕ ಶಂಕರ ವಿಜಯಗಳ ಬಗ್ಗೆ ದಾಖಲೆಗಳಿದ್ದು ಅವುಗಳಲ್ಲಿ ಮಾಧವೀಯ ಶಂಕರ ವಿಜಯ, (೧೪ನೇ ಶತಮಾನದಲ್ಲಿ ರಚಿಸಿದ್ದು) ಕೇರಳೀಯರ ಶಂಕರ ವಿಜಯ, ಪ್ರಾಚೀನ ಶಂಕರ ವಿಜಯ ಎಂಬ ಕೆಲವು ಮಾತ್ರ ಲಭ್ಯವಿದೆ. ಈ ಕೃತಿಗಳು ಆದಿ ಶಂಕರರ ಕಾಲದ ವಿಷಯದ ಮೇಲೆ ಸಾಕಷ್ಟು ಮಾಹಿತಿಯನ್ನು ನೀಡುತ್ತವೆ.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಉಪಾಧ್ಯಕ್ಷರು ಹಾಗೂ ವಿದ್ಯಾಭ್ಯಾಸ ಸಮಿತಿಯ ಅಧ್ಯಕ್ಷರಾದ ಡಾ। ಎ. ಪಿ. ಕೃಷ್ಣ ಅವರ ವೃತ್ತಿಜೀವನದ ನಿವೃತ್ತಿ



1985ರಿಂದ ನಿಟ್ಟೆ ವಿದ್ಯಾಸಂಸ್ಥೆ ಹಾಗೂ ನಿಟ್ಟೆ ಡೀಮ್ಡ್ ಯೂನಿವರ್ಸಿಟಿಗಳಲ್ಲಿ ವಿಭಿನ್ನ ಹುದ್ದೆಗಳೊಂದಿಗೆ ಸೇವೆ ಸಲ್ಲಿಸಿದ್ದ ಡಾ। ಎ. ಪಿ. ಕೃಷ್ಣ ಅವರು ಅಕಾಡೆಮಿಯ ಸುದೀರ್ಘ ವೃತ್ತಿಜೀವನದಿಂದ 4 ಅಕ್ಟೋಬರ್ 2020ರಂದು ನಿವೃತ್ತಿ ಹೊಂದಿದರು. ಹೃದಯಸ್ಪರ್ಶಿ ವಿದಾಯ ಸಮಾರಂಭದಲ್ಲಿ ಕೆ. ಎಸ್. ಹೆಗ್ಗಡೆ ಮೆಡಿಕಲ್ ಅಕಾಡೆಮಿಯ ಫಿಸಿಯೋಲಜಿ ವಿಭಾಗದ ಮುಖ್ಯಸ್ಥ ಹಾಗೂ ವೈಸ್ ಡೀನ್ ಪ್ರೊಫೆಸರ್ ಡಾ। ಎ. ಎಮ್. ಮಿರಾಜ್‌ಕರ್‌ರವರು ನಿವೃತ್ತಿ ಹೊಂದುತ್ತಿರುವ ಡಾ। ಎ. ಪಿ. ಕೃಷ್ಣ ಅವರು ಫಿಸಿಯೋಲಜಿ ವಿಭಾಗದ ಬೆನ್ನೆಲುಬಾಗಿದ್ದುಕೊಂಡು ಡಿಪಾರ್ಟ್‌ಮೆಂಟಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾಗಿದ್ದರೆಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡಿದ್ದ 'ಕ್ಷೇಮಾ'ದ ಡೀನ್ ಪ್ರೊ। ಡಾ। ಪ್ರಕಾಶ್‌ರವರು ಮಾತನಾಡುತ್ತ ಎ. ಪಿ. ಕೃಷ್ಣ ತಮ್ಮ ವಿದ್ಯಾರ್ಥಿಗಳೊಂದಿಗೆ ಹಾಗೂ ಸಹೋದ್ಯೋಗಿಗಳೊಂದಿಗೆ ತುಂಬಾ ಅನ್ಯೋನ್ಯ ಹಾಗೂ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದಾರೆ. ತಮ್ಮ ಜೀವನಶೈಲಿಯಿಂದ, ಕಲಿಸುವ ಪರಿಣತಿಯಿಂದ ಹಾಗೂ ತಾವು ಬರೆದು ಪ್ರಕಟಿಸಿದ ಪಠ್ಯಪುಸ್ತಕಗಳಿಂದ ಇಂದಿನ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ಜೀವನಾದರ್ಶ (Role Model) ಆಗಿದ್ದಾರೆಂದು ಪ್ರಶಂಸಿಸಿದರು. ಸ್ವಾಗತ ಕೋರಿದ ಡಾ। ಶೈಲಜ ಮೂಡಿತ್ತಾಯ ತಮ್ಮ ಮತ್ತು ಡಾ। ಕೃಷ್ಣರ ಮೂರು ದಶಕಗಳ ಆತ್ಮೀಯ ಒಡನಾಟವನ್ನು ನೆನಪಿಸಿಕೊಂಡರು.

ಸನ್ಮಾನಕ್ಕೆ ಉತ್ತರಿಸುತ್ತಾ ಡಾ। ಕೃಷ್ಣ ಅವರು ತಮ್ಮ ವೃತ್ತಿಜೀವನದಲ್ಲಿ ಸಾರ್ಥಕ್ಯವನ್ನು ಕಂಡುಕೊಳ್ಳುವಲ್ಲಿ ನಿಟ್ಟೆ ವಿದ್ಯಾಸಂಸ್ಥೆಯ ಕುಲಪತಿಗಳಾದ ವಿನಯ ಹೆಗ್ಡೆಯವರ ಪ್ರೋತ್ಸಾಹ ಹಾಗೂ ಬೆಂಬಲ ಅನನ್ಯವಾದದ್ದು ಎಂದರು. ಅಂತೆಯೇ ಸಂಸ್ಥೆಯೊಂದಿಗಿನ ತನ್ನ ಸುದೀರ್ಘ ಮಧುರ ಬಾಂಧವ್ಯವನ್ನು ಸ್ಮರಿಸುತ್ತಾ ವೃತ್ತಿಜೀವನದುದ್ದಕ್ಕೂ ತನ್ನೊಂದಿಗೆ ಸಹಕರಿಸಿದ ಎಲ್ಲಾ ಸಹೃದಯೀ ಸಹೋದ್ಯೋಗಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ವಂದನಾರ್ಪಣೆ ಮಾಡಿದ ಡಾ। ಬಿಂದಿಯಾ ಸತೀಶ್‌ರವರು ಡಾ। ಎ. ಪಿ. ಕೃಷ್ಣರವರ ನಿವೃತ್ತಿಯಿಂದುಂಟಾದ ಶೂನ್ಯತೆ ತುಂಬುವುದು ಅಸಾಧ್ಯವೆಂದು ತಮ್ಮ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಡಾ। ಕೃಷ್ಣ ಹಾಗೂ ಅವರ ಪತ್ನಿ ಸುಮನ್‌ಕೃಷ್ಣರನ್ನು ಶಾಲು ಹೊದಿಸಿ ಮಾಲಾರ್ಪಣೆಯೊಂದಿಗೆ ನೆನಪಿನ ಕಾಣಿಕೆಗಳನ್ನು ನೀಡಿ ಸನ್ಮಾನಿಸಲಾಯಿತು. ನಿವೃತ್ತ ಜೀವನ ಆರೋಗ್ಯ, ನೆಮ್ಮದಿ, ಸಂತೋಷಗಳೊಂದಿಗೆ ಚಟುವಟಿಕೆಯುಕ್ತವಾಗಿರಲೆಂಬ ಶುಭಹಾರೈಕೆಯೊಂದಿಗೆ ವಿದಾಯ ಸಮಾರಂಭ ನಡೆಯಿತು.

*ನಿವೃತ್ತ ಜೀವನದಲ್ಲಿ ದೇವರು ಅವರಿಗೆ ಆಯುರಾರೋಗ್ಯ ನೀಡಲಿ, ಶ್ರೀ ಸುಬ್ರಹ್ಮಣ್ಯ ಸಭೆಗೆ ಹಾಗೂ ಸಮಾಜಕ್ಕೆ ಅವರಿಂದ ಇನ್ನೂ ಹೆಚ್ಚಿನ ಸೇವೆ ಸಿಗುವಂತಾಗಲೆಂದು ಹಾರೈಸುತ್ತೇವೆ.*

***'ಜ್ಞಾನಶಕ್ತಿ' ಬಳಗ***





## ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಕೇದಗೆ ಶ್ರೀ ಹರ್ಷಕುಮಾರ್ ಮತ್ತು ಶ್ರೀಮತಿ ಕನಕವಲ್ಲಿ ಹೆಚ್. ಇವರಿಗೆ ಲಯನ್ಸ್ ಸರ್ವೋಚ್ಚ ಪ್ರಶಸ್ತಿ

ತಾರೀಕು 3–10–2020ರಂದು ಮಂಗಳೂರು ಬೆಂದೂರಿನ ಸೆಬಾಸ್ಟಿಯನ್ ಹಾಲ್‌ನಲ್ಲಿ ಜರಗಿದ ದಕ್ಷಿಣ ಕನ್ನಡ, ಹಾಸನ, ಕೊಡಗು, ಚಿಕ್ಕಮಗಳೂರು, ಸುಳ್ಯ ಮುಂತಾದ ಜಿಲ್ಲೆಗಳನ್ನೊಳಗೊಂಡ 'ಲಯನ್ಸ್ ಅವಾರ್ಡ್ ನೈಟ್' ಸಮಾರಂಭದಲ್ಲಿ ಶ್ರೀ ಹರ್ಷಕುಮಾರ್ ಕೇದಗೆ ಮತ್ತು ಶ್ರೀಮತಿ ಕನಕವಲ್ಲಿ ಎಚ್. ಕೇದಗೆ ಇವರಿಗೆ ಜಿಲ್ಲಾ ಗವರ್ನರ್ Ln. ಗೋಮ್ಸ್ ಮತ್ತು ಅನಿತಾ ಗೋಮ್ಸ್ ಇವರು 'Golden Supreme Emissary' ಮತ್ತು 'Golden Supreme Excellence' Awardನ್ನು ನೂರಾರು ಸಭಿಕರ ಕರತಾಡನದೊಂದಿಗೆ ನೀಡಿ ಗೌರವಿಸಿದರು.

34 ವರ್ಷಗಳಿಂದ ಅಂತರ್‌ರಾಷ್ಟ್ರೀಯ ಸೇವಾ ಸಂಸ್ಥೆಯಾದ ಲಯನ್ಸ್ ಕ್ಲಬ್‌ನಲ್ಲಿ ಶ್ರೀ ಹರ್ಷಕುಮಾರ್ ಕೇದಗೆ ದಂಪತಿಗಳು ವಿವಿಧ ರಂಗಗಳಲ್ಲಿ ನೀಡಿದ ಗಣನೀಯ ಸೇವೆಯನ್ನು ಗುರುತಿಸಿ ಅಶೋಕನಗರ ಲಯನ್ಸ್ ಕ್ಲಬ್‌ನವರು ಸನ್ಮಾನಿಸಿದರು.


ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
**House No. 7–3–31–D1,'Vaishnavi' (Upstairs)**
**Vadiraja 2nd Cross, Bailakere, Udupi - 576 101**
**Mobile : 9449903002**



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. LAXMI PRASAD**
ಕಾರ್ಯಕಾರಿಣಿ ಮಂಡಳಿ ಸದಸ್ಯರು

**D.K. District Used Vehicle Dealers & Agents Association (R.), Mangalore**
**Flat No. 103, Deepa Residency, Near Preethi Apartment**
**Kodiyalguttu West, Kodiyalbail, MANGALORE - 575 003**
Mob. : 9845644489, 9964236997 E-mail : laxmiprasad5010@gmail.com

## *** ಅಪಾರ ಕೀರ್ತಿ ಗಳಿಸಿ ***



**ಕುಮಾರಿ ಚೈತ್ರ ಬಿ.** ಈ ಬಾರಿಯ ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ (579/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಗಣೇಶ್ ಭಟ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ಜಿ. ಭಟ್ ಇವರ ಸುಪುತ್ರಿ ಹಾಗೂ ಪುತ್ತೂರಿನ ನರೇಂದ್ರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ.

**ಕುಮಾರಿ ವೈಷ್ಣವಿ ರಾವ್, ಬಜ್ಪೆ** ಈ ಬಾರಿಯ ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ. 92% (550/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬಜ್ಪೆಯ ಡಾ. ಬಿ. ನರೇಶ್ ರಾವ್ ಮತ್ತು ಶ್ರೀಮತಿ ಉಷಾ ಎನ್. ರಾವ್‌ರವರ ಸುಪುತ್ರಿ ಹಾಗೂ ಕಟೀಲು ಶ್ರೀ ದುರ್ಗಾಪರಮೇಶ್ವರೀ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ.



## ಛದ್ಮವೇಷ ಸ್ಪರ್ಧೆಯಲ್ಲಿ ಪ್ರಶಂಸಾ ಪತ್ರ



ಕಡಬದ ಸತ್ಯಶ್ರೀ ಮೆಡಿಕಲ್ಸ್‌ನ ಮಾಲಕ ಶ್ರೀ ರಾಜೇಶ ಕೋಲ್ಪೆ ಹಾಗೂ ಶ್ರೀಮತಿ ಮಲ್ಲಿಕಾ ಕೋಲ್ಪೆಯವರ 7 ವರ್ಷದ ಪುತ್ರಿ **ಕು| ಕೃತಿ** 'ಬಾಲಕೃಷ್ಣ'ನ ವೇಷಧರಿಸಿ ಗೋಕುಲ ಬಾಲಕನೆ ಎಂಬ ಮಲಯಾಳಂ ಭಾಷೆಯ ಹಾಡಿಗೆ ನೃತ್ಯ ಮಾಡಿ, ಇನ್ನೊಂದು ಪಾತ್ರದಲ್ಲಿ ಶಾಲಾ ಅಧ್ಯಾಪಿಕೆಯಾಗಿ ಅಭಿನಯಿಸಿ ಸಪ್ಟೆಂಬರ್‌ನಲ್ಲಿ ನಡೆದ ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘ, ಮಂಗಳೂರು ಪ್ರಾಯೋಜಿತ ಛದ್ಮವೇಷ ಸ್ಪರ್ಧೆಯಲ್ಲಿ ಪ್ರಶಂಸಾ ಪತ್ರ ಪಡೆದಿದ್ದಾಳೆ.

**ವರದಿ : ಜಿ. ಕೆ. ಕೋಲ್ಪೆ, ಉಡುಪಿ ಮೊ. : 9449903002**

## ಮಾರ್ಪಳ್ಳಿ ನಾಗಪ್ಪಯ್ಯ ಕುಟುಂಬಿಕರ ಅವಗಾಹನೆಗೆ

## ದೈವ–ದೇವರ ಹಾಗೂ ನಾಗಬ್ರಹ್ಮ ಸ್ಥಾನದ ಜೀರ್ಣೋದ್ಧಾರಕ್ಕೆ ಶಂಕುಸ್ಥಾಪನೆ

ಅನಾದಿ ಕಾಲದಿಂದಲೂ ಕುಟುಂಬದ ಹಿರಿಯರು ಆರಾಧಿಸಿಕೊಂಡು ಬರುತ್ತಿದ್ದ ದೈವ–ದೇವರ ಮತ್ತು ನಾಗಬ್ರಹ್ಮಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಸಮಿತಿ ರಚಿಸಿಕೊಂಡಿದ್ದು ಈ ಸಮಿತಿಯ ಮುಖಾಂತರ ತಾರೀಕು 12–03–2020ರಂದು ದೈವ–ದೇವರ ಮೂಲಸ್ಥಾನ ಇರುವಲ್ಲಿ **"ತಾಂಬೂಲ ಪ್ರಶ್ನೆ"**ಯನ್ನು ದೈವಜ್ಞರ ಮುಖಾಂತರ ಆಸ್ತಿಕ ಬಂಧುಗಳ ಉಪಸ್ಥಿತಿಯಲ್ಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಕಂಡುಬಂದ ಹಾಗೆ ಪ್ರಾಯಶ್ಚಿತ್ತಾದಿಗಳನ್ನು ಸಂಬಂಧಪಟ್ಟ ಸ್ಥಳಗಳಿಗೆ ಸಲ್ಲಿಸಿ ಮೇ 22/23ರಂದು ಬಾಧಾಕರ್ಷಣ ಕಾರ್ಯವನ್ನೆಲ್ಲಾ ಪೂರ್ಣಗೊಳಿಸಲಾಗಿದೆ.

ಈ ಜೀರ್ಣೋದ್ಧಾರದ ಮೊದಲನೆಯ ಹಂತವಾಗಿ ದೈವ–ದೇವರ ಗುಡಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವ ಸಲುವಾಗಿ **ದಿನಾಂಕ 27–11–2020ರ ಶುಕ್ರವಾರ** ಉತ್ಥಾನ ದ್ವಾದಶಿಯಂದು ಕರಸೇವೆಯೊಂದಿಗೆ ಭೂಮಿಪೂಜೆ ಸಲ್ಲಿಸಿ **"ಶಂಕು ಸ್ಥಾಪನೆ"** ನಡೆಸುವುದು ಹಾಗೆಯೇ ಅದೇ ದಿನ ಸದ್ರಿ ಸ್ಥಳದಲ್ಲಿಯೇ ಸಾಮೂಹಿಕ / ಹೃದಯಪೂರ್ವಕ ದೃಢ ಸಂಕಲ್ಪದೊಂದಿಗೆ **ಶ್ರೀ ಸತ್ಯನಾರಾಯಣ ಪೂಜೆ**ಯನ್ನು ನಡೆಸುವುದೆಂದು ತೀರ್ಮಾನಿಸಿದ್ದೇವೆ.

ಆಸ್ತಿಕ ಸಮಾಜ ಬಾಂಧವರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೈವ–ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

**ಲಕ್ಷ್ಮೀನಾರಾಯಣ್ ರಾವ್ ಎಂ.**
ಕಾರ್ಯದರ್ಶಿ
ಮೊಬೈಲ್ : 9448347696

**ಎಂ. ಆರ್. ವಾಸುದೇವ**
ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ
ಮೊಬೈಲ್ : 9448125412

**ವಿ. ಸೂ. :**

1. ಕರಸೇವೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂದಾಗಿ ತಿಳಿಸಬೇಕಾಗಿ ವಿನಂತಿ.
2. ಶ್ರೀ ಸತ್ಯನಾರಾಯಣ ಪೂಜೆಗೆ ಬರುವಾಗ ಹೂ / ಸಿಂಗಾರ, ಹಣ್ಣು–ಹಂಪಲು ತರುವುದು ಸೂಕ್ತ.
3. ವಿಶೇಷವಾಗಿ ಮಾರ್ಪಳ್ಳಿ ಕುಟುಂಬಿಕರು ತಮ್ಮ ತಮ್ಮ ಕವಲಿನ ಹಿರಿಯರ ಹೆಸರು ವಿಳಾಸ ಮತ್ತು ದೂರವಾಣಿ ಸಂಖ್ಯೆ ಕಳುಹಿಸಿ ಕೊಡಬೇಕಾಗಿ ವಿನಂತಿ.


PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES





ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works





ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001





Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO




## ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನದಲ್ಲಿ
# ನವರಾತ್ರಿ ಮಹೋತ್ಸವ ಸಂಪನ್ನ



**ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನದಲ್ಲಿ ತಾರೀಕು 17-10-2020ರಿಂದ 25-10-2020ರ ವರೆಗೆ ನವರಾತ್ರಿ ಮಹೋತ್ಸವವು ಜರಗಿತು. ಪ್ರತಿದಿನ ರಾತ್ರಿ 7-00 ಗಂಟೆಗೆ ಶ್ರೀ ಪ್ರಸನ್ನ ಪಾರ್ವತೀ ದೇವರ ಸನ್ನಿಧಾನದಲ್ಲಿ ವಿಶೇಷ 'ದುರ್ಗಾಪೂಜೆ'ಯು ಜರಗಿತು.**

ತಾರೀಕು 24-10-2020ನೇ ಶನಿವಾರ ವೇದಮೂರ್ತಿ ಶ್ರೀ ವಾಗೀಶ್ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಶ್ರೀ ಪ್ರತಾಪ ಶರ್ಮರ ನೇತೃತ್ವದಲ್ಲಿ 'ಸಾರ್ವಜನಿಕ ಚಂಡಿಕಾ ಹೋಮ'ವು ಜರಗಿತು. ಚಂಡಿಕಾ ಹೋಮದ ಕರ್ತೃರಾಗಿ ಇನ್ನ ಕೇದಗೆ ಶ್ರೀ ಕೃತಿವಾಸ ಶರ್ಮ ಕುಟುಂಬಸ್ಥರು, ನಂದಿಕೂರು, ಶ್ರೀ ಜನಾರ್ದನ ರಾವ್, ಇನ್ನ ಶ್ರೀ ಲಕ್ಷ್ಮೀಕಾಂತ ರಾವ್, ಪಡುಬಿದ್ರಿಯ ಖ್ಯಾತ ಆರ್ಯುವೇದ ವೈದ್ಯ ಡಾ। ಎನ್. ಟಿ. ಅಂಚನ್‌ರವರು ಉಪಸ್ಥಿತರಿದ್ದರು. ಸುಮಾರು 150 ಜನ ಊರ-ಪರವೂರ ಭಕ್ತರು ಸಾರ್ವಜನಿಕ ಅನ್ನಸಂತರ್ಪಣೆಯ ಪ್ರಸಾದ ಸ್ವೀಕರಿಸಿದರು ಎಂದು ದೇವಳದ ಪ್ರಧಾನ ಅರ್ಚಕರಾದ ಶ್ರೀ ಜಗದಾಭಿರಾಮಸ್ವಾಮಿ, ಅಧ್ಯಕ್ಷರಾದ ಶ್ರೀ ರಘುವೀರ್ ರಾವ್, ಕಾರ್ಯದರ್ಶಿ ಶ್ರೀನಿವಾಸ ಶರ್ಮ, ಖಜಾಂಚಿ ಶ್ರೀ ಪಿ. ಡಿ. ಶೇಖರ ರಾವ್ ತಿಳಿಸಿದರು.

*ವರದಿ : ಶ್ರೀ ಶ್ರೀನಿವಾಸ ಶರ್ಮ, ಪಡುಬಿದ್ರೆ ಮೊಬೈಲ್ : 6362547338*

# ಉಚಿತ ನೋಟ್ ಪುಸ್ತಕ ವಿತರಣೆ



ದಿನಾಂಕ 02-10-2020ರಂದು ಗಾಂಧೀ ಜಯಂತಿ, ಲಾಲ್ ಬಹಾದ್ದೂರ್ ಶಾಸ್ತ್ರಿ ಹಾಗೂ ತಮ್ಮ ಪತಿ ಶ್ರೀ ಶ್ರೀನಿವಾಸ್ ರಾವ್‌ರವರ ಹುಟ್ಟಿದ ಹಬ್ಬದ ಪ್ರಯುಕ್ತ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ದಂಪತಿಗಳು ತಾನು ಶಿಕ್ಷಕಿಯಾಗಿ ದೀರ್ಘ ಸೇವೆ ಸಲ್ಲಿಸಿದ ನೆನಪಿಗೆ ಸರಕಾರಿ (ಫಿಶರೀಸ್) ಹಿರಿಯ ಪ್ರಾಥಮಿಕ ಶಾಲೆಯ (ಚಿತ್ರಾಪುರ) ಎಲ್ಲಾ ಮಕ್ಕಳಿಗೆ ಸುಮಾರು ಸತತ 5 ವರ್ಷಗಳಿಂದ ರೂ. 10,000/- ಮೌಲ್ಯದ ನೋಟ್ ಪುಸ್ತಕಗಳನ್ನು ವಿತರಿಸುತ್ತಿದ್ದು, ಈ ವರ್ಷ ಕೊರೋನಾ ಕಾರಣದಿಂದ ಸಾಂಕೇತಿಕವಾಗಿ ವಿತರಿಸಿದರು.

ಈ ಸರಳವಾದ ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿಯವರು ಶಾಲಾ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು, ಗೋವಿಂದದಾಸ ಕಾಲೇಜಿನ ಪ್ರಾಂಶುಪಾಲರು, ಮೊಗವೀರ ಸಭಾದ ಉಪಾಧ್ಯಕ್ಷರು ಹಾಗೂ ಪಣಂಬೂರು ಲಯನ್ಸ್ ಕ್ಲಬ್ ಅಧ್ಯಕ್ಷರು, ಸದಸ್ಯರು ಪಾಲ್ಗೊಂಡಿದ್ದರು.

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ನಿಟಿಲಾಪುರ ದಿವಗಂತ ಬಾಬು ರಾವ್ ಇವರ ಪತ್ನಿ **ಶ್ರೀಮತಿ ಲೀಲಾವತಿ** (80) ಇವರು ತಾ. 28-10-2020ನೇ ಬುಧವಾರ ದೈವಾಧೀನರಾದರು. ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

✡✡✡



ಕಬ್ಬಿನಾಲೆ ಕುಚ್ಚೂರು ಶ್ರೀ **ಮಹಾದೇವ ಹೆಬ್ಬಾರ್** (92) ತಾ. 26-10-2020ನೇ ಸೋಮವಾರದಂದು ನಿಧನ ಹೊಂದಿದರು. ಇವರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

✡✡✡



ಮುಂಬಯಿಯ ದೊಂಬಿವಿಲಿ ನಿವಾಸಿ **ಶ್ರೀ ಪಿಲಿಂಜ ದಯಾನಂದ ರಾವ್** (83) ತಾ. 12-10-2020ನೇ ಸೋಮವಾರ ನಿಧನ ಹೊಂದಿದ್ದಾರೆ. ಇವರು ಮಗ, ಇಬ್ಬರು ಮಗಳಂದಿರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

✡✡✡



ಪಡುಬಿದ್ರೆ ಆರ್. ಜಗನ್ನಾಥ್ ರಾವ್‌ರವರ ಪತ್ನಿ **ಶ್ರೀಮತಿ ರಮಾದೇವಿ** (89) ತಾ. 10-10-2020ನೇ ಶನಿವಾರ ನಿಧನ ಹೊಂದಿದರು. ಇವರು ಮಗಳು, ಅಳಿಯ, ಮೊಮ್ಮಗಳು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

✡✡✡



ನಿವೃತ್ತ ಶ್ಯಾನುಭೋಗರಾದ ದಿವಂಗತ ಭೋಜರಾವ್‌ರವರ ಧರ್ಮಪತ್ನಿ **ಶ್ರೀಮತಿ ಸರೋಜಿನಿ ಅಮ್ಮ** ಅವರು ತಮ್ಮ ಕನ್ಯಾಡಿ ಮನೆಯಲ್ಲಿ ತಾ. 09-10-2020ರಂದು ದೈವಾಧೀನರಾಗಿದ್ದಾರೆ. ಇವರು, ಐದು ಗಂಡುಮಕ್ಕಳು, ಒಬ್ಬಳು ಮಗಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಉದಾರ ಮನಸ್ಸಿನ ದಾನಿಯಾಗಿದ್ದು ಒಂದು ಕೊಠಡಿ, ಸ್ವಂತ ಜಾಗವನ್ನು ಸೇರಿದಂತೆ ಹಲವಾರು ಕೊಡುಗೆಯನ್ನು ಕನ್ಯಾಡಿಯ ಸರಕಾರಿ ಶಾಲೆಗೆ ನೀಡಿರುತ್ತಾರೆ.

✡✡✡

ಕನ್ಯಾನ ನಿವಾಸಿ ಶ್ರೀ **ಡಿ. ರಾಮಕೃಷ್ಣ ರಾವ್, ಬೈರಿಕಟ್ಟೆ** (61) ತಾರೀಕು 24-10-2020ರಂದು ಬೆಳಗ್ಗೆ ಸ್ವರ್ಗಸ್ಥರಾಗಿರುತ್ತಾರೆ. ಇವರು ಮೂವರು ಸಹೋದರರು ಸೇರಿದಂತೆ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ-
ಮೊಬೈಲ್ : 9972989678
9448104174
**ರವಿಕಿರಣ್ ಕೊೖಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

M.Devanand bhat
Mob: 9845644556
9663993883
Shobha Digital STUDIO
Belavai Moodabidri Yedapadavu
08258-276177 9901995655 0824-2256374
mdevanandbhat@gmail.com

Prop.: Kishore Kumar Kedige
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
Dealers in : 2 & 3 WHEELERS SPARES

ಪತ್ರಿಕೆಗೆ ಶುಭ ಬಯಸುವ-
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ-
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

# ಸಂಸ್ಕೃತ ಪ್ರಚಾರ ಏಕೆ, ಹೇಗೆ? ಒಂದು ಚಿಂತನೆ

ಇಂಗ್ಲಿಷ್ ಭಾಷೆಯೇ ಆಗಲಿ, ಕನ್ನಡ ಭಾಷೆಯೇ ಆಗಲಿ ಅಥವಾ ಹಿಂದಿ ಸೇರಿ ಯಾವುದೇ ಭಾಷೆಯೇ ಆಗಲಿ ಅದರಲ್ಲಿ ಪಾಂಡಿತ್ಯ ಪಡೆದವರು ಅಂದರೆ ಅದರಲ್ಲಿ ಮಾಸ್ಟರ್ಸ್ ಡಿಗ್ರಿ ಪಡೆದವರು, ಡಿಗ್ರಿ ಪಡೆದಾದ ಮೇಲೆ ಕೆಲವರು ಕಾಲೇಜು, ಸ್ಕೂಲುಗಳಲ್ಲಿ ಆ ಪಾಠಗಳನ್ನು ಮಾಡುವುದನ್ನು ಬಿಟ್ಟರೆ ಭಾಷೆಗಳಲ್ಲಿನ ಎಷ್ಟು ಸಾಹಿತ್ಯವನ್ನು ಅವರು ಆಮೇಲೆ ಓದಿದ್ದಾರೆ ಎಂಬ ಮೂಲಪ್ರಶ್ನೆಯನ್ನು ಎತ್ತಿದರೆ ಉತ್ತರ ಬಹುಶಃ ಶೂನ್ಯವೇ ಇರಬಹುದು ಅಲ್ಲವೇ? ಆದ್ದರಿಂದ ಅವರ ಭಾಷೆಯ ಕಲಿಕೆಯ ಪಾಂಡಿತ್ಯ ಮಾಸ್ಟರ್ಸ್ ಡಿಗ್ರಿಯಲ್ಲಿ ಪಡೆದ 5 ಪ್ರಶ್ನೆಗಳಿಗೆ ಉತ್ತರ ಕೊಟ್ಟದ್ದಕ್ಕಷ್ಟೇ ಸೀಮಿತ. ಆಮೇಲೆ ಸಾಹಿತ್ಯದ ಪುಸ್ತಕಗಳನ್ನು ಅವರೆಂದೂ ತಿರುವಿಯೂ ಸಹ ಹಾಕುವುದಿಲ್ಲ. ಕೆಲವು ಅಪವಾದಗಳು ಇರಬಹುದು, ಹಾಗಿರುವಾಗ ಸಂಸ್ಕೃತ ಓದಿರುವವರ ಸಂಸ್ಕೃತ ಜ್ಞಾನದ ಪರೀಕ್ಷೆ ಏಕೆ ನಡೆಯಬೇಕು ಎನ್ನುತ್ತಾರೆ ಕೆಲವರು.

## ಸಂಸ್ಕೃತ ಪ್ರಚಾರ ಏಕೆ, ಹೇಗೆ?

ವರುಷ ವರುಷವೂ ಶ್ರಾವಣ ಪೂರ್ಣಿಮೆಯ ದಿನವನ್ನು ನಾವು ಸಂಸ್ಕೃತ ದಿನವನ್ನಾಗಿ ಆಚರಿಸುತ್ತೇವೆ. ಇದೊಂದು ಭಾರತದ ಋಷಿಗಳ ಸ್ಮರಣೆಗೆ ಮೀಸಲಾಗಿರಿಸಿರುವ, ಪೂಜೆ ಸಲ್ಲಿಸಲಾಗುವ ಪವಿತ್ರ ದಿನ. ಈ ಬಾರಿ 31 ಜುಲೈ 2020ರಿಂದ 6 ಆಗಸ್ಟ್ 2020ರ ವರೆಗೆ ಸಂಸ್ಕೃತ ಸಪ್ತಾಹವನ್ನು 'ಸಂಸ್ಕೃತ ಭಾರತಿ'ಯ ವತಿಯಿಂದ ಆಚರಿಸುದ್ದೇವೆ. ದೇಶದ ಹಲವೆಡೆ ಆನ್‌ಲೈನ್ ಮೂಲಕ ವಿಶೇಷ ಸ್ಪರ್ಧೆಗಳನ್ನು ಏರ್ಪಡಿಸಿ ಶ್ಲೋಕಪಠನ, ಗೀತಾಶ್ಲೋಕಪಠನ, ಮಹಾವ್ಯಕ್ತಿಗಳ ಜೀವನವನ್ನು ಸಂಸ್ಕೃತದಲ್ಲಿ ಸ್ಮರಣ ಮಾಡಿಕೊಳ್ಳುವುದು ಇತ್ಯಾದಿಯ ಮೂಲಕ ಸಂಸ್ಕೃತ ಸಪ್ತಾಹವನ್ನು 'ಸಂಸ್ಕೃತ ಭಾರತಿ'ಯು ದೇಶದಾದ್ಯಂತ ಆಚರಿಸಿತು. ಮಕ್ಕಳಿಂದಲೂ ಉತ್ತಮ ಸ್ಪಂದನ 'ಸಂಸ್ಕೃತ ಭಾರತಿ'ಯ ಈ ಕಾರ್ಯಕ್ರಮಕ್ಕೆ ಸಿಕ್ಕಿತು. ಸಂಸ್ಕೃತ ಶ್ಲೋಕಗಳ ಉಚ್ಚಾರಣೆ, ವಿವರಣೆ, ತನ್ಮಯವಾಗಿ ಹಾಡುವಿಕೆ ಮೊದಲಾದುವುಗಳನ್ನು ಮಕ್ಕಳ ಬಾಯಿಂದ ಕೇಳಿದಾಗ, ದೂರ ದೂರದ ಗಲ್ಫ್ ದೇಶಗಳಲ್ಲಿ ಸಂಸ್ಕೃತಕ್ಕಾಗಿ ಕೆಲಸ ಮಾಡುತ್ತಿರುವ 'ಸಂಸ್ಕೃತ ಭಾರತಿ'ಯ ಕಾರ್ಯಕರ್ತರುಗಳು ತಮ್ಮ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿದುದನ್ನು ವಿವರಿಸಿದಾಗ ಬಹುಶಃ ಸಂಸ್ಕೃತಕ್ಕಾಗಿ ನಾವು ಮೊದಲಿನಿಂದಲೂ ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಕೆಲಸ ಮಾಡಿದ್ದರೆ ಇಂದು ನಾವು ಸಂಸ್ಕೃತದ ವೈಭವದ ದಿನಗಳನ್ನೇ ಕಾಣಬಹುದಾಗಿತ್ತು ಎನ್ನಿಸಿತು. ಸಂಸ್ಕೃತೋತ್ಸವವನ್ನು ಇನ್ನೂ ಹೆಚ್ಚಾಗಿ ವಿಜೃಂಭಣೆಯಿಂದ ಆಚರಿಸಬಹುದಿತ್ತು ಎನ್ನಿಸಿತು.

ಏನಪ್ಪಾ ಇವರು ಕನ್ನಡಿಗರಾಗಿ, ಕನ್ನಡದ ಬಗೆಗೆ ಅದರ ಉಚ್ಛ್ರಾಯ ಸ್ಥಿತಿಗತಿಗಳ ಬಗೆಗೆ ಅದರ ಅಭಿವೃದ್ಧಿಯ ಬಗೆಗೆ ಮಾತನಾಡಬೇಕು ಅದನ್ನು ಬಿಟ್ಟು ಸಂಸ್ಕೃತದ ಬಗೆಗೆ ಹೇಳುತ್ತಿದ್ದಾರಲ್ಲಾ ಎಂದು ವ್ಯಗ್ರರಾಗಬೇಡಿ. ಕರ್ನಾಟಕದಲ್ಲಿ ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂದು ನೀವು ಹೇಳಲು ಹೊರಟರೆ ಕನ್ನಡ ಧ್ವಜ ಎತ್ತಿ ಹಿಡಿಯುವುದರಲ್ಲಿ ನಾನೂ ಒಬ್ಬ ನಿಮ್ಮೊಡನೆ. ಅದರಲ್ಲಿ ಮೊದಲಿಗರಲ್ಲಿ ನಾನೇ ಮೊದಲಿಗ ಸಂದೇಹವೇ ಇಲ್ಲ. ಬಲವಂತವಾಗಿ ಎಲ್ಲರನ್ನು ಕರೆದೊಯ್ಯುತ್ತೇನೆ. ನಾವು ಮೆಟ್ಟುವ ನೆಲ ಅದೇ ಕರ್ನಾಟಕ, ಕುಡಿಯುವ ನೀರು ಕಾವೇರಿ.

ಆದರೆ ಕನ್ನಡ ಧ್ವಜ ನಾವು ಹಿಡಿದದ್ದನ್ನು ಬೆಳಗಾವಿಯ ಗಡಿಯಲ್ಲಿ, ಉತ್ತರದ ಬೀದರಿನ ತುತ್ತತುದಿಯಲ್ಲಿ, ದಕ್ಷಿಣದಲ್ಲಿ, ಕೇರಳದ ಗಡಿಯಲ್ಲಿ, ಪೂರ್ವದ ಹೊಸೂರಿನ/ತಮಿಳುನಾಡ ಗಡಿಯ ಬಳಿಯಲ್ಲಿ ಬೇರೆ ಭಾಷೆಗಳ ಧ್ವಜಗಳನ್ನು ಹಿಡಿದವರು ಕಾಣಿಸಿದಾಗ ತಮಿಳು, ತೆಲುಗು, ಮಲಯಾಳಂ, ಮರಾಠಿ ಮೊದಲಾದ ಕಲರವ ಕೇಳುವಂತಾದಾಗ ನಮ್ಮ ಕನ್ನಡ ಧ್ವಜಗಳಿಗೆ ಅಲ್ಲಿ ದಾರಿಯನ್ನೇ ಬಿಡುವುದಿಲ್ಲವಲ್ಲವೆಂದಾಗ, ಅಲ್ಲಿ ಅವರ ಧ್ವಜಗಳು ಹಾರಾಡುವುದು ನ್ಯಾಯವೇ ಆದಾಗ ಆಗ ನಾವು ಯಾವ ಧ್ವಜ ಹಿಡಿಯುತ್ತೇವೆ? ಅವರಾದರೂ ಯಾವ ಧ್ವಜ ಹಿಡಿದಾರು ನಮ್ಮ ಗಡಿಗಳ ಒಳಗೆ? ರಾಷ್ಟ್ರಕೂಟ ಚಕ್ರವರ್ತಿ–ಮೂರನೇ ಕೃಷ್ಣ ಅವನ ಕನ್ನಡದ ಶಾಸನ ಸಿಗುವ ದೂರದ ಜೂರ ಮಧ್ಯಪ್ರದೇಶದಲ್ಲಿ ನಾವು ಇಂದು ಅಂದಿನಂತೆ ಅದರ ಬಗೆಗೆ ಏನಾದರೂ ಹೇಳಲಾದೀತೆ? ಅಖಂಡ ಭಾರತದ ಭಾಷಾ ಧ್ವಜವೂ ಒಂದು ಇರಬೇಕೇ ಬೇಡವೇ ನಮ್ಮ ಇನ್ನೊಂದು ಕೈಯಲ್ಲಿ? ಅದು ಯಾವುದು? ಆ ಪ್ರಶ್ನೆ ಬಂದಾಗ ಇನ್ನೊಂದು ಪ್ರಶ್ನೆಯು ಅಂಟಿಕೊಳ್ಳುತ್ತದೆ. ನಾವು ಭಾರತೀಯರಾಗಿ ಇಂಗ್ಲಿಷ್ ಮಾತನಾಡಬೇಕೇಕೆ? ವಿಶ್ವಸಂಸ್ಥೆಯಲ್ಲಿ ನಿಮ್ಮ ಭಾಷೆಯಲ್ಲಿ ಮಾತಾಡಿ ಎಂದು ಹೇಳಿದಾಗ ನಾವು ಮಾತನಾಡುವ ಭಾಷೆ ಯಾವುದು?

ಇಂಗ್ಲಿಷ್‌ನಲ್ಲಿ ಗ್ರಾಮೀಣ ಭಾಗದಲ್ಲಿ ನಾವು ಸಾಮಾನ್ಯ ಜನರೊಡನೆ ಮಾತನಾಡಲು ಸಾಧ್ಯವಾದೀತೆ? ಶ್ರೀಸಾಮಾನ್ಯನಿಗೆ ಅದು ಅರ್ಥವಾದೀತೆ? ಒಪ್ಪಿಕೊಳ್ಳೋಣ ಇಂಗ್ಲಿಷ್‌ಗೆ ಅದರದ್ದೇ ಆದ ಗಮ್ಮತ್ತಿದೆ, ಗಾತ್ರವಿದೆ, ವಿಶ್ವವ್ಯಾಪ್ತಿಯಿದೆ. ಹಲವಾರು ದೇಶಗಳಲ್ಲಿ ಅದರಲ್ಲಿಯೇ ಮಾತನಾಡುತ್ತಾರೆ. ಆ ಭಾಷೆಯೇ ನಮ್ಮ ಆಡಳಿತ ಭಾಷೆಯಾಗಿ ಸುಮಾರು ನೂರೈವತ್ತು ಇನ್ನೂರು ವರುಷಗಳಿಂದ ದರ್ಬಾರ್ ನಡೆಸಿದೆ. ಸ್ವಾತಂತ್ರ್ಯ ಬಂದ 75 ವರುಷದ ನಂತರವೂ ಆಡಳಿತ ಭಾಷೆಯಾಗಿಯೇ ಉಳಿದಿದೆ. ಮೇಲ್ವರ್ಗದ ಭಾಷೆಯಾಗಿದೆ ಬೇರೆ ಬೇರೆ ಸಾಹಿತ್ಯವೂ ಅದರಿಂದ ವೃದ್ಧಿಯಾಗಿದೆ. ಅದನ್ನು ಆಡಳಿತ ವರ್ಗದ ಭಾಷೆಯ ಸ್ಥಾನದಿಂದ ಕೆಳಗಿಳಿಸಲು ಸದ್ಯದ ಮಟ್ಟಿಗೆ ಯಾರೂ ಊಹಿಸುವುದೂ ಇಲ್ಲ. ಅಷ್ಟರ ಮಟ್ಟಿಗೆ ಅದು ಗದ್ದುಗೆ ಹಿಡಿದು ಕೂತಿದೆ ಅಂದಿನಿಂದಲೂ. ಇಷ್ಟೆಲ್ಲ ಇದ್ದರೂ ಅದು ಸಾಮಾನ್ಯ ಭಾರತೀಯನನ್ನು ಕೆಳಮಟ್ಟದಲ್ಲಿಯೂ ಸಾಂಸ್ಕೃತಿಕವಾಗಿ ಬಂಧಿಸಲು, ಸಂಪರ್ಕಿಸಲು ಸಾಧ್ಯವಾಗಿಲ್ಲ. ನಮ್ಮೆಲ್ಲರನ್ನು ತಲುಪಲು ಸಹ ಅದಕ್ಕೆ ಸಾಧ್ಯ ಆಗಿಲ್ಲವಲ್ಲ. ನಮ್ಮನ್ನು ಒಂದುಗೂಡಿಸಲು ಆ ಭಾಷೆಯಲ್ಲಿ ಯಾವು ಕಸುವೂ ಇಲ್ಲ. ಎಲ್ಲೋ ಕೆಲವರು ಇಂಗ್ಲಿಷ್ ಟಿ.ವಿ. ಚಾನಲ್, ಇಂಗ್ಲಿಷ್ ಪೇಪರ್ ಓದುವ ಕೆಲವರುಗಳು ಭಾರತೀಯತೆಯ ಬಗೆಗೆ ಮಾತನಾಡಲು ದೇಶ ನಿರ್ಮಿಸಲು ಏನಾದರೂ ಸೂತ್ರಗಳನ್ನು ಕೊಟ್ಟಿದ್ದಾರೆಯೇ? ಹಾಗೆ ಏನು ಮಾತನಾಡಿಯಾರು? ಹಾಗೆ ಮಾತನಾಡಲೂ ಇಂಗ್ಲಿಷ್ ಬಲ್ಲವರಿಗೆ ಸಾಧ್ಯವಾಗಿಲ್ಲದಿರುವ ಬಗೆಗೆ ಸಂಸ್ಕೃತಿಯ ಬಗೆಗೆ ಪಾಶ್ಚಾತ್ಯ ರೀತಿಯನ್ನೇ ಮೆಚ್ಚಿಕೊಳ್ಳುವವರಿಗೆ ಏನು ಹೇಳಬಹುದು? ಏಕೆ ಗೊತ್ತಿಲ್ಲ ಅವರಿಗೆ? ಇಷ್ಟೆಲ್ಲ ಓದಿದ್ದರೂ ಭಾರತೀಯ ಸಂಸ್ಕೃತಿಯ ನಿಜವಾದ ಆತ್ಮದ ಬಗೆಗೆ ಮಾತನಾಡಲೂ ಇಂಗ್ಲಿಷ್ ಬಲ್ಲವರಿಗೆ ಸಾಧ್ಯವಾಗಿಲ್ಲ! ಅದರ ಬಗೆಗೆ ಮಾತನಾಡಲೂ ಅವರುಗಳು ಇಚ್ಛೆಸುತ್ತಾರೋ ಇಲ್ಲವೋ?

ಕನ್ನಡ ಭಾಷೆಯ ಬಗೆಗೆ ಕನ್ನಡ ರಾಜ್ಯದ ಗಡಿಯಿಂದಾಚೆಗೆ ಹೇಗೆ ನಮ್ಮ ಭಾಷೆಗೆ ಯಾವುದೇ ಸ್ಥಾನ ದೊರಕುವುದಿಲ್ಲವೋ ಹಾಗೆಯೇ ಉಳಿದ ಭಾಷೆಗಳಿಗೂ ಅವರ ಗಡಿಯಿಂದಾಚೆಗೆ ಯಾವುದೇ ಸ್ಥಾನಮಾನ ಅಪೇಕ್ಷಿಸುವ ಹಾಗೆಯೂ ಇಲ್ಲ. ಇನ್ನೂ ಹಿಂದಿ ಭಾಷೆಯನ್ನು ದೇಶದಲ್ಲಿ ಹೆಚ್ಚಿನ ಜನ ಮಾತನಾಡುತ್ತಿದ್ದಾರೆ ಎಂದ ಮಾತ್ರಕ್ಕೆ ಅದಕ್ಕೂ ಸಹ ಆಕ್ಷೇಪಣೆಗಳಿವೆ. ಆ ಭಾಷೆಯ ಅಭಿವೃದ್ಧಿಗೂ 50–60 ವರುಷಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಹಾಗೆಯೇ ಆಡಳಿತ ವರ್ಗದಲ್ಲಿನ ಹಿರಿಯರು ಹಿಂದಿಯನ್ನು ರಾಜ್ಯ ಭಾಷೆಯನ್ನಾಗಿಸಲು ಪ್ರಯತ್ನವನ್ನೇನೋ ನಡೆಸಿದ್ದಾರೆ. ಆದರೆ ಅದು ಹೃದಯದಾಳದಿಂದ ಬಂದಿದ್ದಲ್ಲ. ಬಹುಮಾನಗಳನ್ನಿಟ್ಟು ಸಾವಿರ ಪದ ಬರೆದರೆ ಇಷ್ಟು ಪ್ರೋತ್ಸಾಹಧನ ಹೀಗೆ ಹಾಗೆ ಕಲಿಸಲು ಹೋದಾಗ ಯಾವುದೇ ಪ್ರಯತ್ನವೂ ಸಫಲವಾಗುವುದಿಲ್ಲ. ಟಿ.ವಿಯಲ್ಲಿ, ಆಕಾಶವಾಣಿಯಲ್ಲಿ ಹಿಂದಿ ಸಿನಿಮಾಗಳು, ಧಾರಾವಾಹಿಗಳು ಧಾರಾಳವಾಗಿ ಬರುತ್ತವೆ. ಸ್ವಲ್ಪ ಹಿಂದಿಯನ್ನು ಕಲಿಸುತ್ತವೆ. ಆದರೆ ಅವು ಯಾವ ಸಂಸ್ಕೃತಿಯನ್ನು ಭಾರತವನ್ನು ಒಂದು ಸೂತ್ರದಲ್ಲಿ ಬಂಧಿಸಲು ಪ್ರಯತ್ನ ಪಡುತ್ತಿದೆ ಎಂದೆಲ್ಲ ಕೇಳಬೇಡಿ. ಅವರಿಗೂ ಗೊತ್ತಿಲ್ಲ, ನಮಗೆ ಹೇಳಲೂ ಬಿಡುತ್ತಿಲ್ಲ. ಹೇಳಿದರೂ ಕೇಳಿಸಿಕೊಳ್ಳುವುದಿಲ್ಲ. ಅಲ್ಲಿ ಏನಾದರೂ ಅಖಂಡಭಾರತವನ್ನು ಸೆಳೆದಿಡುವ ವಿಚಾರ ಸಂಸ್ಕೃತಿ ಇದೆಯೇ? ಹೀಗಾಗಿ ಇದೀಗಲೇ ನಮ್ಮನ್ನು ಒಂದು ಸೂತ್ರದಲ್ಲಿ ಭಾರತೀಯರಾಗಿ ಬಂಧಿಸುವುದಾದರೂ ಯಾವುದಾದರೂ, ಎಲ್ಲಿಯಾದರೂ, ಏನಾದರೂ ಇದೆಯೇ? ಇದ್ದರೆ ಅವು ಯಾವುವು?

ಈ ಸಂದರ್ಭದಲ್ಲಿ ನೆನಪಾಗುವುದು **'ಭಾರತಸ್ಯ ಪ್ರತಿಷ್ಠೆ ದ್ವೇ ಸಂಸ್ಕೃತಂ ಸಂಸ್ಕೃತಿಸ್ತಥಾ'**. ಅದೇ ಭಾರತದ ಕಿರೀಟವನ್ನು ವಿಶ್ವಸ್ತರದಲ್ಲಿ ಎತ್ತಿ ಹಿಡಿದಿಟ್ಟಿರುವುದು ಎರಡು. ಒಂದು ಸಂಸ್ಕೃತ, ಇನ್ನೊಂದು ಸಂಸ್ಕೃತಿ.

ಆ ಸಂಸ್ಕೃತಿಯನ್ನೂ ಹಿಡಿದಿಟ್ಟಿರುವ ಭಾಷೆ ಸಂಸ್ಕೃತ ಭಾಷೆ. ಯಾವುದೇ ಏಕ ಚಕ್ರಾಧಿಪತ್ಯದ ಅಡಿಯಲ್ಲಿ ದೇಶದಲ್ಲಿ ಸದಾ ಆಡಳಿತದ ಭಾಷೆಯಾಗಿರದಿದ್ದರೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಅಟಕ್‌ನಿಂದ ಕಟಕನವರೆಗೆ ಇಲ್ಲಿನ ನಿವಾಸಿಗಳೆಲ್ಲರ ಮನದಲ್ಲಿ ಜಿನುಗುವ ಜಿನುಗುತ್ತಿದ್ದ ವಿಚಾರ **'ಗಂಗೆ ಚ ಯುಮುನೇ ಚೈವ ಗೋದಾವರೀ ಸರಸ್ವತೀ ನರ್ಮದೇ ಸಿಂಧು, ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು'** ಅಥವಾ ಕಾಶೀ ರಾಮೇಶ್ವರಗಳಲ್ಲಿನ ಶ್ರದ್ಧೆ, ಉತ್ತರ ದಕ್ಷಿಣಗಳ ಭೇದಭಾವವಿರದೆ ಎಲ್ಲರೂ ಸ್ಮರಿಸುವ ಭಾವ ಯಾವುದದು? ಈ ಸಂಸ್ಕೃತಿಯನ್ನು ನಿರ್ಮಾಣ ಮಾಡಿದ್ದು ಯಾವ ಭಾಷೆ? ಬೇರೆ ಭಾಷೆಗಳಲ್ಲಿ ಬಂದಿರುವ ಸಾಹಿತ್ಯದ ಭಾಷೆ ಮತ್ತು ಅಲ್ಲೆಲ್ಲ ಪುನರುಕ್ತಗೊಳ್ಳುತ್ತಿರುವ ಪುರಾಣ ಪುರುಷರು, ಶ್ರೀರಾಮ, ಶ್ರೀಕೃಷ್ಣರಿಂದ ಹಿಡಿದು ರಾಮಕೃಷ್ಣ ವಿವೇಕಾನಂದರವರೆಗೆ ನಮ್ಮೆಲ್ಲರಿಂದ ಪೂಜೆಗೊಳ್ಳುವಂತೆ ಮಾಡಿದ್ದು ಯವುದದು? ದೇಶದ ಸ್ವಾತಂತ್ರ್ಯಕ್ಕಾಗಿ ಬೇರೆ ಬೇರೆ ಕಡೆಗಳಲ್ಲಿ ಹೋರಾಡಿ ತಮ್ಮ ಪ್ರಾಣಗಳನ್ನು ತೆತ್ತ ತಮ್ಮ ಜೀವನವನ್ನು ಮುಡಿಪಾಗಿಟ್ಟವರ ಉಸಿರಿನಲ್ಲಿ ಇದ್ದ ಭಾರತ, ಜೈಹಿಂದ್ ಅಥವಾ ವಂದೇ ಮಾತರಂ ಭಾವನೆ ಹೇಗೆ ಬಂತು? ಅದನ್ನು ಜಾಗೃತಗೊಳಿಸಿದ್ದ ವಿಚಾರ ಯಾವುದದು? 1857ರ ಮೊದಲ ಸ್ವಾತಂತ್ರ್ಯ ಯುದ್ಧ ವಿಜಯನಗರ ಸಾಮ್ರಾಜ್ಯ, ಶಿವಾಜಿ ಮಹಾರಾಜರು ಹೊತ್ತಿಸಿದ ಕಿಡಿ ರಾಣಾ ಪ್ರತಾಪನ ಸ್ವಾಭಿಮಾನದ ತೇಜವನ್ನು ಪ್ರಖರವಾಗಿ ಉರಿಸಿದ, ಶಂಕರಾಚಾರ್ಯರು ಸ್ಥಾಪಿಸಿದ ದೇಶದ ನಾಲ್ಕು ದಿಕ್ಕುಗಳ ನಾಲ್ಕು ಆಮ್ನಾಯ ಪೀಠಗಳು ಇವುಗಳೆಲ್ಲದರ ಹಿಂದಿದ್ದ ಚೇತನಗಳು ಎಲ್ಲರಲ್ಲೂ ಹರಿಯುವಂತೆ ಮಾಡುತ್ತಿದ್ದ ಭಾಷೆ ಯಾವುದದು?

ಅದರ ಹಿಂದೆ ಚೈತನ್ಯಸ್ವರೂಪಿಯಾಗಿ ಹರಿದ, ಹರಿಯುತ್ತಿರುವ, ಮುಂದೆಯೂ ಹರಿಯಲಿರುವ ಸಂಸ್ಕೃತಿ ರಸವನ್ನು ಉಕ್ಕಿಸಿದ್ದು ನಮ್ಮೆಲ್ಲರನ್ನು ಒಂದೇ ಸೂತ್ರದಲ್ಲಿ ಬಂಧಿಸಿದ್ದು ಸಂಸ್ಕೃತ ಭಾಷೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ.

**ಎಂ. ಆರ್. ವಾಸುದೇವ,** ಅಧ್ಯಕ್ಷರು, 'ಸಂಸ್ಕೃತ ಭಾರತಿ', ಮಂಗಳೂರು


PREETHIKA
AUTOMOBILES

2493633
9845851573

Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils



ಪತ್ರಿಕೆಗೆ ಶುಭ ಬಯಸುವ–



ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ಧ್ರುವ್

# ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ
## ಬಾರ್ಕೂರು, ಮಂದಾರ್ತಿ




**ಬಾರ್ಕೂರು ಮಂದಾರ್ತಿ ನಮ್ಮ ಸಮಾಜ ಬಾಂಧವರ ಸಂಘ ಶ್ರೀ ಮಾಸ್ತಿ ಅಮ್ಮ ದೇವಸ್ಥಾನ, ಧರ್ಮಶಾಲೆ, ಬಾರ್ಕೂರು ಇಲ್ಲಿ ಶ್ರೀ ಜ್ಞಾನಶಕ್ತಿ ಸ್ಥಾನಿಕ ಸಭಾ ತಾರೀಕು 11–10–2020ರಂದು ಉದ್ಘಾಟನೆಗೊಂಡಿತು.**

### ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ, ಬಾರ್ಕೂರು, ಮಂದಾರ್ತಿ
### ಸಂಘದ ಪದಾಧಿಕಾರಿಗಳು

| | |
|---|---|
| ಗೌರವಾಧ್ಯಕ್ಷರು : | ಶ್ರೀ ರಾಮಚಂದ್ರ ರಾವ್, ಬಾರ್ಕೂರು |
| ಅಧ್ಯಕ್ಷರು : | ಶ್ರೀ ಮಂಜುನಾಥ ರಾವ್, ಕೋಟೆಕೇರಿ |
| ಸಂಚಾಲಕರು : | ಶ್ರೀ ಶಂಭುಶಂಕರ ರಾವ್, ಮಂದಾರ್ತಿ |
| ಖಜಾಂಚಿ : | ಶ್ರೀ ಭಾಸ್ಕರ ಹೆಬ್ಬಾರ್, ಮಾಸ್ತಿಬೈಲ್ |
| ಪ್ರಧಾನ ಕಾರ್ಯದರ್ಶಿ : | ಶ್ರೀಮತಿ ಸವಿತಾ, ಎರ್ಮಾಳ್ |
| ಉಪಾಧ್ಯಕ್ಷರು : | ಶ್ರೀ ಪಿ. ಜಯರಾಮ ರಾವ್ |
| | ಶ್ರೀ ಗಣೇಶ್ ರಾವ್, ಬಾರ್ಕೂರು |
| | ಸ್ಫೂರ್ತಿ ಟಿ. ವಿ., ಮಂದಾರ್ತಿ |
| ಸಹ ಕಾರ್ಯದರ್ಶಿ : | ಶ್ರೀ ಅನಂತಪದ್ಮನಾಭ, ಬಾರ್ಕೂರು |
| | ಶ್ರೀ ರವೀಂದ್ರ ರಾವ್ ಬಿ., ಬಾರ್ಕೂರು |
| | ಶ್ರೀ ಹರೀಶ್ ಹೆಬ್ಬಾರ್, ಹವರಾಲು |

— — — — — — — — — ಗೌರವ ಸಲಹೆಗಾರರು — — — — — — — — —

| | |
|---|---|
| ಶ್ರೀ ದೇವದಾಸ ರಾವ್, ಕೂಡ್ಲಿ | ಶ್ರೀ ರಾಘವೇಂದ್ರ ರಾವ್, ಚೌಳಿಕೇರಿ |
| ಶ್ರೀ ಕೃಷ್ಣಮೂರ್ತಿ ರಾವ್, ಪಳ್ಳಿಗುಡ್ಡೆ | ಶ್ರೀ ರಮೇಶ ರಾವ್, ಹವರಾಲು |
| ಶ್ರೀ ಚಾಮರಾಜ್ ರಾವ್, ತಂತ್ರಾಡಿ | ಶ್ರೀ ಶ್ರೀಕೃಷ್ಣ ಶ್ಯಾನುಭೋಗ್ |

— — — — — — — — — ಸದಸ್ಯರು — — — — — — — — —

| | |
|---|---|
| ಶ್ರೀ ಸತೀಶ್ ರಾವ್, ಕೂಡ್ಲಿ | ಶ್ರೀಮತಿ ಶಕುಂತಳಾ ಎಚ್. ಕೋಟೆಕೇರಿ |
| ಶ್ರೀ ರಾಜೇಶ್ ಶ್ಯಾನುಭೋಗ್, ಮೂಡುಕೇರಿ | ಶ್ರೀ ಗಿರೀಶ್, ತಂತ್ರಾಡಿ |
| ಶ್ರೀ ಶ್ಯಾಮಪ್ರಕಾಶ್, ಮೈರ್ಕೊಮೆ | ಶ್ರೀ ರಾಘವೇಂದ್ರ ರಾವ್, ಮಾಸ್ತಿಬೈಲು |

**ಮಹಿಳಾ ವಿಭಾಗ**

| | |
|---|---|
| ಅಧ್ಯಕ್ಷರು : | ವೀಣಾ ಜಿ. ರಾವ್ |
| ಕಾರ್ಯದರ್ಶಿ : | ಚಂದ್ರಿಕಾ ರಾವ್ |
| ಸದಸ್ಯರು : | ನಾಗರತ್ನ ಬಿ. ಹೆಬ್ಬಾರ್ |
| ಸಂಘದ ಕಾನೂನು ಸಲಹೆಗಾರರು : | ಕೀರ್ತಿ ಚಂದ್ರಿಕಾ |
| ಸಂಘದ ಆಂತರಿಕ ಲೆಕ್ಕಪರಿಶೋಧಕಕರು : | ಶ್ರೀ ಪ್ರಸಾದ್, ತಂತ್ರಾಡಿ |
| ಮಾಧ್ಯಮ ಸಲಹೆಗಾರರು : | ಶ್ರೀ ಶಶಿಧರ, ಮಾಸ್ತಿಬೈಲು |
| ವೈದ್ಯಕೀಯ ಸಲಹೆಗಾರರು : | ಡಾ. ರಾಘವೇಂದ್ರ ರಾವ್, ಮಾಸ್ತಿಬೈಲು |

# ಬಾಳಿಗೊಂದು ಕೊಡುಗೆ 'ಬಾಳಿನ ಗಿಡ' ಪುಸ್ತಕ ವಿಮರ್ಶೆ

'ಬಾಳಿನ ಗಿಡ' ಎಂಬ ಹೆಸರನ್ನು ನೋಡಿದ ಕೂಡಲೇ ಇದೊಂದು ಆತ್ಮಚರಿತ್ರೆ ಎಂದುಕೊಂಡು ಓದಲು ಆರಂಭಿಸಿದ ನನಗೆ ಪೂರ್ತಿ ಓದಿ ಮುಗಿಸಿದಾಗ ನನಗರಿಯದೆ ಒಂದು ನಿಟ್ಟುಸಿರು ಹೊರಹೊಮ್ಮಿತು. ಕಾರಣ ಇಷ್ಟೇ... ಓದಿನ ಆರಂಭದಲ್ಲಿ ನೆಂಟರನ್ನು ಕರೆಯುವ ಕಾಗೆ ಕೊನೆಯಲ್ಲಿ ಅಪಸ್ವರದಲ್ಲಿ ಕೂಗಿದೆ. ಹಾಗೆ ಗೋವಿಂದರಾಯ ಕಥೆ ಆರಂಭ ಅವರ ನಿವೃತ್ತಿಯಾದರೆ, ಕಥೆಯ ಕೊನೆಯಾಗುವುದು ಅವರು ಜಗತ್ತಿನಿಂದ ನಿವೃತ್ತರಾಗುವುದರೊಂದಿಗೆ.

ಇನ್ನು ಈ ಪುಸ್ತಕ ಇತ್ತೀಚೆಗೆ ಎಂಟನೇ ಮುದ್ರಣ ಕಂಡಿದೆ ಎಂದರೆ ಇದರ ಮಹತ್ವ ಅರ್ಥವಾಗುತ್ತದೆ. ಯಾವುದೇ ಉತ್ಪ್ರೇಕ್ಷೆಯಿಲ್ಲದ ಸೀದಾಸಾದಾ ಸಾಗಿದ ದಶಕದ ಕಥೆಯಿದು. ಒಬ್ಬನೇ ಕಥಾನಾಯಕ ಅವರೇ ಗೋವಿಂದರಾಯರು. ಅವರು ನಿವೃತ್ತರಾದರು. 'ವಯಸ್ಸಿನಲ್ಲಿ ಏನುಂಟು, ಎಲ್ಲಾ ಇರುವುದು ಮನಸ್ಸಿನಲ್ಲಿ' ಎಂಬಂತೆ ದುಡಿಮೆಯಲ್ಲೇ ದೇವರನ್ನು ಕಂಡ ಧೀಮಂತ. ಒಲ್ಲದ ಮನಸ್ಸಿನಿಂದ ತನ್ನ ಹುಟ್ಟೂರು ಬೈಲೂರನ್ನು ಬಿಟ್ಟು ಬಂಗಾಡಿಗೆ ಬಂದು ಗೊಂಡಾರಣ್ಯವನ್ನು ನಂದನವನವನ್ನಾಗಿಸಿದ ಸಾಹಸಿ. ಮಕ್ಕಳಿಂದ ಮನಸ್ಸಿಗಾದ ನೋವು, ಮಕ್ಕಳ ಅಗಲಿಕೆ, ಜೊತೆ ಜೊತೆಗೆ ಕಾಡುತ್ತಿದ್ದ ರೋಗ ರುಜಿನಗಳನ್ನು ಎದುರಿಸಿ ಗೌರವಾನ್ವಿತ ವ್ಯಕ್ತಿತ್ವದ ಗೋವಿಂದರಾಯರನ್ನು ಯಾರೇ ಆದರೂ ಮೆಚ್ಚಲೇ ಬೇಕು. ಕರಾವಳಿಯ ಬಯಲುನಾಡಿನಲ್ಲಿ ತನ್ನವರ ಒಡನಾಡಿದ ಬಂಧುಗಳೊಂದಿಗೆ ಊರಿನಲ್ಲಿ ಒಬ್ಬ ಹಿರಿಯ ವ್ಯಕ್ತಿಯಾಗಿ, ಗೌರವಾನ್ವಿತ ಶಿಕ್ಷಕನಾಗಿ, ಊರವರ ಕಷ್ಟಸುಖಗಳಿಗೆ ಸಲಹೆಗಾರನಾಗಿ ಬದುಕಿದ ಗೋವಿಂದರಾಯರು ನಿವೃತ್ತಿಯ ಅನಂತರ ಬಲವಂತಕ್ಕೆ ಮಲೆನಾಡಿನ ದಟ್ಟಡವಿಗೆ ಬಂದಾಗ ಎದೆ ಗುಂದಲಿಲ್ಲ, ಬದಲಿಗೆ ಛಲಬಿಡದ ತ್ರಿವಿಕ್ರಮನಂತೆ ಹಗಲಿರುಳು ದುಡಿದು ಕಾಡನ್ನು ನಾಡನ್ನಾಗಿಸಿದ ಸಾಧಕ.

'ಬಾಳಿನ ಗಿಡ'ದ ಕೃತಿಕಾರ ಶ್ರೀ ಎನ್. ಹರಿದಾಸ ರಾಯರ ಪ್ರಕೃತಿ ಪ್ರೇಮ ನಿರಾಶೆಯ ಕಡಿಯಲು ಕಡಲಲ್ಲಿ ತೇಲಿದರೂ ಆಶಾವಾದಿಯಾಗಿರಬೇಕೆಂಬ ಜೀವನ ಶ್ರದ್ಧೆ, ಉದಾತ್ತ ಮನೋಭಾವ ಈ 'ಬಾಳಿನ ಗಿಡ'ದಲ್ಲಿ ಒಡಮೂಡಿವೆ. ಕೇವಲ 12 ದಿನದಲ್ಲಿ ಕಾದಂಬರಿಯನ್ನು ಬರೆದಿದ್ದಾರೆಂದರೆ ಇದೊಂದು ಅದ್ಭುತ ಕೆಲಸವೇ ಸರಿ. ಇದು ಕೇವಲ ಹರಿದಾಸರಿಗೆ ಮಾತ್ರವೇ ಸಾಧ್ಯವಾಗಿರಬಹುದಾದ ಸಾಹಸ ಕಾರ್ಯ.

ಬಾಲ್ಯದಿಂದಲೂ ಸಾಹಿತ್ಯಾಸಕ್ತರಾದ ರಾಯರ ಸಾಹಿತ್ಯ ಅಧ್ಯಯನಶೀಲತೆ ಎಂತಹವರನ್ನೂ ಬೆರಗುಗೊಳಿಸುತ್ತದೆ. ಕಡುಬಡತನದಲ್ಲಿಯೂ ಕೊನರುತ್ತಿದ್ದ ಅವರ ಸಾಹಿತ್ಯ ಲತೆ ಕರಾವಳಿಯ ಬಯಲಿನಿಂದ ಉತ್ತರದ ಹುಬ್ಬಳ್ಳಿಗೆ ಹೋದವರು ಬಾಲ್ಯದಲ್ಲಿ ತಮ್ಮ ಮನದ ಹೊಲದಲ್ಲಿ ಬಿತ್ತಿದ್ದ ದೇಶಪ್ರೇಮದ ಹೋರಾಟಕ್ಕೆ ಹನಿ ಹನಿ ನೀರೆರೆದರು. ತಮ್ಮ ಪತ್ರಿಕೋದ್ಯಮದ ಮೂಲಕ ತಮ್ಮ ದೇಶಪ್ರೇಮವನ್ನು 'ಬಾಳಿನ ಗಿಡ'ದಲ್ಲಿ ಗೋವಿಂದರಾಯರು ಮಗ ಹರಿಯ ಮೂಲಕ ಪ್ರತಿಬಿಂಬಿಸಿದ್ದಾರೆ.


ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಮಗ ಹರಿಗೆ ಅದೆಲ್ಲ ಬೇಡ ಎಂದು ತಂದೆಗೆ ಹೋರಾಟಕ್ಕೆ ಇಳಿದಾಗಿದೆ. 'ಮಾಡು ಇಲ್ಲವೇ ಮಡಿ' ಇದೊಂದೇ ಈಗ ನನ್ನ ಮುಂದಿರುವ ದಾರಿ. ಗಾಂಧಿ ತತ್ವಕ್ಕೆ ನಾನು ಅಂಟಿಕೊಂಡಿದ್ದೇನೆ. ಇದು ನನ್ನ ತತ್ವ ಎಂದು ಹೇಳುವ ಧ್ವನಿ ಅದು ಹರಿದಾಸರ ಮನದೊಳಗಿನ ಮಾರ್ದನಿಯಾಗಿದೆ.


ಹರಿದಾಸರ ಹನ್ನರಡನೆಯ ದಿನದ ಹನ್ನೆರಡನೆಯ ಅಧ್ಯಾಯದಲ್ಲಿ ಪ್ರಪಂಚದ ಎರಡನೇ ಮಹಾಯುದ್ಧ ನಡೆದುಹೋಗುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಎಂದರೆ ತಾನು ಜೀವವಿಟ್ಟು ಬೆಳೆಸಿದ ಗಿಡಗಳ ಬಿಟ್ಟಂತೆ ಎಂದು ನುಡಿಯುವ ಎಪ್ಪತ್ತರ ಗೋವಿಂದ ರಾಯರು ತೀರಾ ಸ್ಥಿತಪ್ರಜ್ಞನಂತೆ ಕಾಣುತ್ತಾರೆ. 'ವಿನಾದೇನಾ ಜೀವನಂ ಅನಾಯಾಸ ಮರಣಂ' ಎಂಬುದಕ್ಕೆ ಇವರೇ ನಿದರ್ಶನವಾಗುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ಹಾಗೆಯೇ ಅವರ ಪ್ರಾಣಪಕ್ಷಿಗೆ ಇವರ ದೇಹದಿಂದ ಸ್ವಾತಂತ್ರ್ಯ ಸಿಕ್ಕಿತು ಎಂಬಲ್ಲಿ ಕಾದಂಬರಿ ಮುಕ್ತಾಯವಾಗುತ್ತದೆ. ಮಹಾಭಾರತದ ಮಹಾನ್ ವ್ಯಕ್ತಿ ಭೀಷ್ಮಾಚಾರ್ಯರು ಇಚ್ಛಾಮರಣಿಯಾದಂತೆ ಇವರು ಕೂಡ ತಮ್ಮ ಸ್ವತಂತ್ರ ಭಾರತದ ಕನಸು ನನಸಾದ ಖುಷಿಯಲ್ಲಿ ಪ್ರಾಣಬಿಡುತ್ತಾರೆ. ಓದಿ ಮುಗಿಸಿದ ನನಗೆ ನಿಟ್ಟುಸಿರೊಂದು ಅರಿವಿಲ್ಲದೆ ಹೊರಹೊಮ್ಮುತ್ತದೆ.

ಶ್ರೀ ಹರಿದಾಸ ರಾಯರು ಬರೆದ 20 ಕೃತಿಗಳಲ್ಲಿ ಎತ್ತಿ ಮತ್ತೆ ಮತ್ತೆ ಹೃದಯಕ್ಕೆ ಹತ್ತಿರವಾಗುವ ಮಹತ್ತರವಾದ ಕೃತಿ ಎಂದರೆ ಈ 'ಬಾಳಿನ ಗಿಡ'. ಇದು ನಾಳಿನ ಪೀಳಿಗೆಗೆ ಮಾರ್ಗದರ್ಶಿ ದೀವಿಗೆಯಂತಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಶ್ರೀ ಹರಿದಾಸರಾಯರು ಕಾಯಿಲೆಯಿಂದ ನರಳುತ್ತಿದ್ದ ನನ್ನ ಅರ್ಧಾಂಗಿಗೆ ಔಷಧಿ ತೆಗೆದುಕೊಂಡು ಬರುವಾಗ ಎದುರು ಬಂದ ಬಸ್ಸು ಯಮದೂತನಾಗಿ ಬಂದು ಅವರನ್ನು ಬಲಿ ತೆಗೆದುಕೊಂಡದ್ದು ದೊಡ್ಡ ದುರಂತವೇ ಸರಿ. ಕೇವಲ 34 ವರ್ಷದಲ್ಲಿ ಅದು ಕೂಡ ಇನ್ನೂ ಬಾಳಿ ಬದುಕಬೇಕಾದವರು ಬಲಿಯಾಗಿದ್ದು ಸಾಹಿತ್ಯ ಲೋಕಕ್ಕೊಂದು ಅಪಾರ ನಷ್ಟ. ಶ್ರೀ ಹರಿದಾಸರು ಮತ್ತೊಮ್ಮೆ ಹುಟ್ಟಿಬಂದು ಮತ್ತಷ್ಟು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ, ಸಮಾಜಕ್ಕೆ ನೀಡುತ್ತಾ ಇದ್ದಾರೆಂಬುದುದೇ ನನ್ನ ಮನದ ಮೆಲುಕು. ಎಷ್ಟು ವರ್ಷ ಬದುಕಿದ್ದು ಎಂಬುದಕ್ಕಿಂತ ಹೇಗೆ ಬದುಕಿದ್ದು ಎಂಬುದು ಮಹತ್ವದ ಅಂಶ. ಈ ನಿಟ್ಟಿನಲ್ಲಿ ಶ್ರೀ ಹರಿದಾಸರು ಸಾರ್ಥಕ ಜೀವಿಯೆಂದು ಹೇಳಬಹುದು. ಓದುಗರ, ಸಾಹಿತಿಗಳ, ಸಮಾಜದ, ಬಂಧುಗಳ ಮನಸ್ಸಿನಲ್ಲಿ ಅವರು ಜೀವಂತವಾಗಿದ್ದಾರೆ ಎಂಬುದು ನಿತ್ಯ ಸತ್ಯ.

**– ಸಾವಿತ್ರಿ ಮನೋಹರ್, ಕಾರ್ಕಳ**


**ಪ್ರತಿಗಳಿಗಾಗಿ ಸಂಪರ್ಕಿಸಿ :**
**ಶ್ರೀ ಗೋವಿಂದ ರಾವ್ ✆ : 9945695360**









# ತಟಾಕ್ಷ ಕ್ಷೇತ್ರದ 'ಬಬಿಯ' ಮತ್ತವನ ಸುತ್ತಲಿನ ಅಂತೆ-ಕಂತೆಗಳ ಕುರಿತಂತೆ...

ಆಗಿನ್ನೂ ಜಾಗತೀಕರಣದ ಜೊತೆಗೆ ಇತರ 'ಕರಣ'ಗಳು ಕಿರಣಗಳಿಗೊಡ್ಡಿಕೊಳ್ಳದ ಕಾಲ. ಸಂಪರ್ಕ ಸೇತುವಂತೂ ಇಲ್ಲವೇನೋ ಅನಿಸುವಷ್ಟು ಕ್ಷೀಣವಾಗಿದ್ದ ಸಮಯ. ಜನಸಂಖ್ಯೆಯೂ ಊರೊಳಗೆ ವಿರಳವೇ ಆಗಿತ್ತು. ಈ ಎಲ್ಲವುಗಳ ನಡುವೆಯೂ ನನ್ನೂರು 'ಅನಂತಪುರ' ಸ್ವಚ್ಛಂದ ಪ್ರಕೃತಿಯ ನಡುವೆ ನಿಷ್ಕಲ್ಮಶವಾಗಿ ಪಸರಿ ನಿಂತಿತ್ತು. ಕೇರಳದ ಉತ್ತರ ಭಾಗದ ತುತ್ತತುದಿಯ ಆ ರಾಜ್ಯಕ್ಕೆ ಅದರ ಗಡಿಯ ಮುಕ್ತಾಯವಾದರೆ, ಅದೇ ಗಡಿರೇಖೆಯು ಕಾಸರಗೋಡಿನ ಗಡಿನಾಡ ಕನ್ನಡಿಗರಿಗೆ ಕನ್ನಡದ ಭಾವಸ್ಥಿತಿಯೊಳಕ್ಕೆ ಇಳಿಯಲಿರುವ ಆರಂಭದ ರಹದಾರಿ.

'ಕಡುಶರ್ಕರ ಪಾಕ'ದಲ್ಲಿ ರೂಪುಗೊಂಡು 'ಶ್ರೀದೇವಿ – ಭೂದೇವಿ' ಸಹಿತ ಸರೋವರದ ಮಧ್ಯದಲ್ಲಿ ನೆಲೆಸಿರುವ 'ಶ್ರೀ ಅನಂತಪದ್ಮನಾಭ ಸ್ವಾಮಿ'ಯ ಜೊತೆಗೆ ಕ್ಷೇತ್ರ ರಕ್ಷಕ 'ಬಬಿಯ' ಇಲ್ಲಿನ ಮುಖ್ಯ ಆಕರ್ಷಣೆ. ಇಲ್ಲೇ ಬಿಲ್ವಮಂಗಲ ಸ್ವಾಮಿಯವರ ಗುಹೆಯೂ ಇದೆ. ಶ್ರೀ ಅನಂತಪದ್ಮನಾಭ ಸ್ವಾಮಿಯು ಇದೇ ಗುಹೆಯ ಮೂಲಕ ಅನಂತಪುರದಿಂದ ತಿರುವನಂತಪುರಕ್ಕೆ ಹೋಗಿ ಅಲ್ಲಿ ಶಯನರಾದರು ಎಂಬ ಪ್ರತೀತಿಯೂ ಇದೆ.

"ಈ ಕ್ಷೇತ್ರವು ಸರಿಸುಮಾರು 9–10ನೇ ಶತಮಾನಕ್ಕೆ ಸೇರಿದ್ದು ಎಂದು ಇತಿಹಾಸತಜ್ಞ ಉಡುಪಿಯ ಶ್ರೀ ಪಿ. ಗುರುರಾಜ ಭಟ್ ಅಭಿಪ್ರಾಯಪಟ್ಟಿರುತ್ತಾರೆ. ಅವರು ಬರೆದ 'Antiquities of South Kanara' ಪುಸ್ತಕದಲ್ಲಿ ಕಾಸರಗೋಡು ಜಿಲ್ಲೆಯನ್ನೂ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯೊಳಗೆ ಸೇರಿಸಿ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ. ಕ್ಷೇತ್ರಕ್ಕೆ ಹೊಂದಿಕೊಂಡೇ ಇರುವ ನನ್ನ ಹಿರಿಕರಿಂದ ಬೆಳಗಿ ಬಾಳಿದ 'ಅನಂತಪುರ ದೊಡ್ಡ ಮನೆ'ಯ ಮೂಲ ಪಂಚಾಂಗವು ಕೂಡ 9–10ನೇ ಶತಮಾನಕ್ಕೆ ಸೇರಿದ್ದೆಂದೂ ಮನೆಗೆ ಭೇಟಿಯನ್ನಿತ್ತ ಸಂದರ್ಭದಲ್ಲಿ ಅವರು ಅಭಿಪ್ರಾಯಿಸಿದ್ದಾರೆ.

ಆದಿಯಿಂದ ಇಪ್ಪತ್ತನೇ ಶತಮಾನ ಅಂದರೆ 1994ರ ವರೆಗೂ ಸರೋವರ ಕ್ಷೇತ್ರದ 'ಆನುವಂಶಿಕ ಮೊಕ್ತೇಸರ'ರಾಗಿ ನನ್ನ ಮನೆಯ ಹಿರಿಕರು ತಮ್ಮ ಕೈಯಲ್ಲಾದ ಸೇವೆಯನ್ನು ಶ್ರೀ ಸ್ವಾಮಿಗೂ, ಕ್ಷೇತ್ರಕ್ಕೂ ಮಾಡುತ್ತಾ ಬಂದವರು. ಕೇರಳ ಸರ್ಕಾರದಿಂದ 'ವಾರ್ಷಿಕ ರೂ. 400–00 ತಸ್ತಿಕ ಹಣ'ವು ದೇವಸ್ಥಾನದ ಖರ್ಚಿಗೆಂದು ಆನುವಂಶಿಕ ಮೊಕ್ತೇಸರರಾಗಿದ್ದ ನಮಗೆ ದೊರೆಯುತ್ತಿತ್ತು. ಅದು ಯಾವುದಕ್ಕೂ ಸಾಲುತ್ತಿರಲಿಲ್ಲವಾದ್ದರಿಂದ ನಮ್ಮ ಕೈಯಿಂದಲೇ ಕಾಸು ಹಾಕಿ ವಿವಿಧ ಹಬ್ಬ–ಹರಿದಿನಗಳನ್ನು ದೇವಳದಲ್ಲಿ ಆಚರಿಸುತ್ತಿದ್ದೆವಲ್ಲದೆ, ದೇವಳದ ಅರ್ಚಕರ ಊಟ, ವಸತಿಯ ಹೊಣೆಯನ್ನೂ ನಾವೇ ಹೊತ್ತು ಕೊಂಡಿದ್ದೆವು. ಅವರ ಊಟ, ವಸತಿ ನಮ್ಮ ಮನೆಯಲ್ಲಿಯೇ. ಜೊತೆಗೆ ಅವರಿಗೆ ಸಂಬಳವನ್ನೂ ನಾವೇ ಕೊಡುತ್ತಿದ್ದೆವು. ತದನಂತರ ಕೇರಳ ರಾಜ್ಯದ 'ದೇವಸ್ವಮ್ ಬೋರ್ಡ್' ಅಡಿಯಲ್ಲಿ ದೇವಸ್ಥಾನವು ಬರಲು ಮುಂದೆ 'ದೇವಸ್ವಮ್ ಬೋರ್ಡ್' ಕ್ಷೇತ್ರದ ಎಲ್ಲಾ ನಿತ್ಯದ ಆಗುಹೋಗುಗಳನ್ನು ನೋಡಿಕೊಳ್ಳುತ್ತಾ ಆಡಳಿತವನ್ನು ನಡೆಸಲು ತೊಡಗಿತು.

ಅನಂತರಪುರದ ಪಕ್ಕದಲ್ಲಿರುವ 'ಪೆರ್ಣೆ ಶ್ರೀ ಮುಚ್ಚಿಲೋಟ್ ಭಗವತಿ' ಎಂಬ ವಾಣಿಯ–ಗಾಣಿಗ ಸಮುದಾಯ ಕ್ಷೇತ್ರದ ಆನುವಂಶಿಕ ಯಜಮಾನಿಕೆಯೂ ನಮ್ಮ ಮನೆಯವರದ್ದೇ. ಪ್ರಸಕ್ತ ನನ್ನ ತಂದೆ ಶ್ರೀ ಶ್ರೀಕೃಷ್ಣಯ್ಯ ಅನಂತಪುರ ಅವರು ಕ್ಷೇತ್ರದ ಆನುವಂಶಿಕ ಯಜಮಾನರಾಗಿರುತ್ತಾರೆ. 'ಪೆರ್ಣೆ ಶ್ರೀ ಮುಚ್ಚಿಲೋಟ್ ಭಗವತಿ'ಯ ಬಾಳು ಭಂಡಾರವಿರುವುದು ಕೂಡ ನಮ್ಮ ಮನೆಯಲ್ಲೇ. ಅಂತೆಯೇ ನಮ್ಮ ಮನೆಯ 'ಧೂಮಾವತಿ' ಹಾಗೂ 'ವಿಷ್ಣುಮೂರ್ತಿ' ದೈವಗಳ ಬಾಳು ಭಂಡಾರವೂ ಇದೆ. ಇವಿಷ್ಟು ಹಿನ್ನೆಲೆಯೊಂದಿಗೆ ಇದೀಗ ವಿಷಯಕ್ಕೆ ಬರುತ್ತೇನೆ.

❖ ❖ ❖

ಭೂಮಿ ಆಕಾಶವನ್ನು ಒಂದು ಮಾಡುವಂತೆ 'ಧೋ...' ಎಂದು ಸುರಿಯುವ ಮಳೆಯ ಜೊತೆಗೆ ಮಿಂಚಿನ ಬೆಳಕ ಹಬ್ಬ. ಗುಡುಗಿನ ಢಮರು ನಾದವು ಸರ್ವೇಸಾಮಾನ್ಯ ವಾಗಿದ್ದಂತಹ ಕಾಲಘಟ್ಟವದು. ವಿದ್ಯುತ್ತೀಕರಣವಿನ್ನೂ ಎಲ್ಲಾ



ಕಡೆಗೂ ಹಬ್ಬಿರಲಿಲ್ಲ. ಟಾರ್ಚ್ ಬೆಳಕೇ ದಾರಿದೀಪವಾಗಿದ್ದ ಕಾಲ. ನಿಪ್ಪೋ, ಫಿಲಿಪ್ಸ್ ಬ್ಯಾಟರಿಗಳೇ ನಂಬಿಕೆಗೆ ಅರ್ಹ ವಾಗಿದ್ದವು. ಅಂತಹ ದಿನದಲ್ಲಿ ರಜೆಯ ಒಂದು ದಿನ ಕುಂಬಳೆ ಪೇಟೆಯಲ್ಲಿ ಪಪ್ಪ ನಡೆಸುತ್ತಿದ್ದ 'ಸಂತೋಷ ಸಾಹಿತ್ಯ ಸದನ'ಕ್ಕೆ ಪಪ್ಪನ ಜೊತೆಗೆ ನಾನೂ ಹೋಗಿದ್ದೆ. ಹೆಬ್ಬಾರರ ಹೋಟೇಲಿನಲ್ಲಿ ನನ್ನಿಷ್ಟದ ತಿಂಡಿಯನ್ನು ತಿಂದು ಬೆಳಕು ಕತ್ತಲೆಯತ್ತ ಜಾರುತ್ತಲೇ ನಾವು ಮನೆಯತ್ತ ಹೆಜ್ಜೆ ಹಾಕಲು ಅನುವಾದೆವು.

ಊಹಿಸಲೂ ಅಸಾಧ್ಯವಾದ ಮಳೆಗಾಲದ ಅಬ್ಬರ. ಕುಂಬಳೆ ಪೇಟೆಯಿಂದ ಬಸ್ಸು ಹಿಡಿದು ನಾಯ್ಕಾಪು ಬಸ್ ತಾಣದಲ್ಲಿ ಇಳಿದು, ಪಪ್ಪನ ಕೈಯೊಳಗೆ ನನ್ನ ಪುಟ್ಟ ಕೈಯನ್ನಿಟ್ಟು ರಭಸದಿಂದ ಬೀಸುತ್ತಿದ್ದ ಮಳೆಗೆ ನನಗಿಂತಲೂ ದೊಡ್ಡ ಗಾತ್ರದ ಕೊಡೆಯನ್ನು ಹಿಡಿದುಕೊಂಡು ಹೆಜ್ಜೆಯನ್ನಿಡುತ್ತಿದ್ದೆ. ಗಾಳಿ ಮಳೆಯ ಅಂದಿನ ವೈಭವವನ್ನು ಅನುಭವಿಸಿದವರಿಗೆ ಮಾತ್ರ ಅದರ ಸೊಬಗು ಮತ್ತದರ ರುದ್ರರಮ್ಯತೆಯು ಗೊತ್ತಿರಲು ಸಾಧ್ಯ. ನಾಯ್ಕಾಪುವಿನಿಂದ ಅನಂತಪುರದ ನಮ್ಮ ಮನೆಗೆ ಡಾಂಬರು ಕಾಣದ ಕಲ್ಲು–ಮಣ್ಣಿನ, ಉಬ್ಬು–ತಗ್ಗು, ಹೊಂಡಗಳ ರಸ್ತೆಯಿತ್ತು. ಮನೆಯನ್ನು ತಲುಪಲಿದ್ದ ಹಾದಿಯುದ್ದಕ್ಕೂ ಜನವಾಸವೇ ಇದ್ದಿರಲಿಲ್ಲ. ಹಾಗಿರಲು ಪಪ್ಪನ ಕೈಯಲ್ಲಿನ ಟಾರ್ಚ್ ನಮಗೆ ದಾರಿದೀಪ. ಉಸಿರ ಮೇಲೆ ಉಸಿರನ್ನೆಳೆದುಕೊಳ್ಳುತ್ತಾ ಉಬ್ಬಿದ ರಸ್ತೆಯನ್ನು ಏರಿ ಇಳಿದು ನಿಟ್ಟುಸಿರು ಬಿಡುತ್ತಿರುವಾಗಲೇ ಟಾರ್ಚ್ ಕೈ ಕೊಟ್ಟೇ ಬಿಟ್ಟಿತು. "ಪಪ್ಪಾ..." ಎಂದು ಕೂಗಿದೆ. "ಇದ್ದೇನಲ್ಲ ಭಯವೇತಕೆ?" ಎಂಬ ಮಾತೇ ಧೈರ್ಯ ರೂಪಕವಾಗಿ (ಇಂದಿಗೂ) ಪಪ್ಪನ ಶೌರ್ಯದೊಳಕ್ಕೆ ನಾನೂ ಇಳಿದುಬಿಟ್ಟೆ. ಕಾಣದ ದಾರಿಗೆ ಮಿಂಚೇ ಬೆಳಕಾಯಿತು. ಕಣ್ಣಳತೆಯಲ್ಲಿ ಕಾಣುವ ಮನೆಯ ಉಪ್ಪರಿಗೆಯ ಹಂಚು ಮಿಂಚ್ಬೆಳಕಿಗೆ ಬೆಳಗಿ ಮಾಯವಾಗುತ್ತಿತ್ತು.

ಹರನ ಮುಡಿಯಿಂದ ಚಿಮ್ಮಿದ ಮಳೆಯು ಸುತ್ತಲಿನ ಗುಡ್ಡದ ಮೇಲೆ ಬಿದ್ದು ಹರಿಯ ಪಾದಕ್ಕೆ ಹರಿಯುವ ಮೊದಲು ತೊರೆಯಾಗಿ, ಝರಿಯಾಗಿ ಹರಿಹರಿದು ಹೋಗುವಾಗ ಮನೆಯ ಪಕ್ಕದಲ್ಲಿರುವ 'ಚೆಂಬಟಿಕೆರೆ'ಯೂ ತುಂಬಿ ತುಳುಕಿ ಹರಿಯುತ್ತಿತ್ತು. ರಸ್ತೆ ಮತ್ತು ಕೆರೆಯ ಮಧ್ಯೆ ಒಂದು ಆಳವಾದ ಹರಿವಿದೆ. ಗುಡ್ಡದ ಒಂದು ಭಾಗದಿಂದ ಹರಿದು ಬರುವ ಮಳೆನೀರು ರಭಸದಿಂದ ಆಳವಾದ ಆ ಹರಿವಿನ ಮೂಲಕ ಸಾಗಿ ಚೆಂಬಟಿಕೆರೆಯನ್ನು ಸೇರಿ ಅಲ್ಲಿಂದ ಮುಂದಕ್ಕೆ ಪಯಣಿಸುವುದು ಅದರ ಸಹಜ ನಿಯಮ. ಅಂತಹ ಆಳವಾದ ಹರಿವನ್ನು ನಾವಂದು ದಾಟಬೇಕಿತ್ತು. ಪಪ್ಪ ತನ್ನ ಒಂದು ಕೈಯಲ್ಲಿ ನನ್ನನ್ನು ಎತ್ತಿಕೊಂಡು, ಜೊತೆಗೆ ಅವರ ಚೀಲವನ್ನೂ, ಇನ್ನೊಂದು ಕೈಯಲ್ಲಿ ಕೊಡೆಯನ್ನೂ ಹಿಡಿದುಕೊಂಡು ಆಳವಾದ ಹರಿವನ್ನು ದಾಟುವಾಗ ನೀರಿನ ರಭಸಕ್ಕೆ ತೂಗಾಡುತ್ತಲೇ ಸಂಭಾಳಿಸಿಕೊಂಡು, ನೀರಿನಲ್ಲಿ ಮುಳುಗಿದ್ದ ಕಾಣದ ಭೂಮಿಯ ಮೇಲೆ ಅಂದಾಜಿಗೆ ಪಾದವನ್ನಿಡುತ್ತ, ಎಲ್ಲಾ ಭಾರವನ್ನು ಹೊತ್ತುಕೊಂಡು, ಕೈಕೊಟ್ಟ ಟಾರ್ಚ್‌ನ ಅನುಪಸ್ಥಿತಿಯೊಳಗೆ ಆಗೊಮ್ಮೆ ಈಗೊಮ್ಮೆ ಆಗಸದಲ್ಲಿ ಮೂಡಿ ಮರೆಯಾಗುವ ಮಿಂಚ್ಬೆಳಕಿನ ಸಹಾಯದೊಂದಿಗೆ ಆಳವಾದ ರಭಸದ ಹರಿವನ್ನು ದಾಟಿದೆವು.

ಕೂಗಳತೆಯಲ್ಲಿ ಕಾಣುವ ಮನೆ ಮತ್ತದಕ್ಕೆ ತಾಗಿ ಕೊಂಡೇ ಇರುವ ಶ್ರೀ ಅನಂತಪದ್ಮನಾಭ ಸ್ವಾಮಿಯ ದೇವಳ. ಸಂಜೆಯ ಪೂಜೆ ಮುಗಿದ ಅನಂತರದ ದೇವಳದ ಚಾಕರಿಯ ಸದ್ದು ಮಳೆಯ ನಡುವೆಯೂ ಮೆಲ್ಲನೆ ಕೇಳಿ ಬರುತ್ತಿತ್ತು. ಎಣ್ಣೆಯಲ್ಲಿ ಸಣ್ಣಗೆ ಉರಿಯುವ ದೇವಳದ ದೀಪವು ದೂರದಿಂದ ಮಿಣುಕುಹುಳ ಮಿನುಗಿದಂತೆ ಕಾಣುತ್ತಿತ್ತು. ಕಡಿದಾದ ದಾರಿಯಲ್ಲಿ ಹೆಜ್ಜೆ ಇಡಬೇಕಾದ ಸಮಯವೀಗ. ನಂಬಿದ್ದ ಕೈದೀಪವು ಜೊತೆಯಲ್ಲಿದ್ದೂ ಇಲ್ಲದಂತೆ. ಮಿಂಚ್ಬೆಳಕಿಗೆ ಸುಮಾರಾಗಿ ಕಾದು ಅದೂ ಕಾಣದಿರಲು ಸುರಿವ ಧಾರಾಕಾರ ಮಳೆಯು ದಪ್ಪದ ಪರದೆಯಂತಾಗಲು ಮುಂದಿರುವುದೇ ಕಾಣುತ್ತಿರಲಿಲ್ಲ. ಆ ಗಳಿಗೆಯಲ್ಲಿ ಪಪ್ಪಾ ನನ್ನ ಕೈ ಹಿಡಿದು ಇನ್ನೇನು ಮುಂದಡಿ ಇಡಬೇಕು ಎನ್ನುವಷ್ಟರಲ್ಲಿ "ಅಣ್ಣಾ ಬಬಿಯಾ..." ಎನ್ನುವ ಕೂಗು ಎದುರಿನಿಂದ ಹೊರಟಿತು. ಆ ಕೂಗಿಗೆ ಪ್ರತಿಯಾಗಿ 'ಚೆಂಬಟಿಕೆರೆ'ಯೊಳಕ್ಕೆ ಭಡಾರನೆಂದು ಬಿದ್ದ ಸದ್ದು ಹೊರಡಲು ನಾವು ಅರೆಕ್ಷಣ ಸ್ತಂಭೀಭೂತರಾದೆವು!

ಆಗಿದ್ದಿಷ್ಟೇ... ದಾರಿ ಮಧ್ಯೆ ಅನಂತಪುರ ಕ್ಷೇತ್ರ ರಕ್ಷಕ 'ಬಬಿಯ' ಮಳೆಯ ಸೊಬಗನ್ನು ಆಸ್ವಾದಿಸುತ್ತಾ ಅಡ್ಡಲಾಗಿ ಮಲಗಿದ್ದ. ನಮ್ಮ ಇನ್ನೊಂದೇ ಹೆಜ್ಜೆ ಅವನ ಮೇಲೆಯೇ ಇಡುವುದಿತ್ತು. ಆದರೆ ದೇವಸ್ಥಾನಕ್ಕೆ ಹೋಗಿ ತನ್ನ ಮನೆಯತ್ತ ತೆರಳುತ್ತಿದ್ದ ನೆರೆಹೊರೆಯ 'ಚಂದ್ರಶೇಖರ'ನ ಕೈ ಬೆಳಕಿಗೆ 'ಬಬಿಯ' ಕಂಡಿದ್ದರ ಜೊತೆಗೆ ನಮ್ಮನ್ನೂ ಕಂಡಿದ್ದರ ಪರಿಣಾಮ 'ಅಣ್ಣಾ ಬಬಿಯಾ...' ಎಂಬ ಅವನ ಕೂಗು 'ಬಬಿಯ'ನಿಗೆ ಕೇಳಿದ್ದೇ ಆತ ನಮಗೆ ದಾರಿಯನ್ನು ಕಲ್ಪಿಸಿಕೊಟ್ಟಿದ್ದ.

❖ ❖ ❖

ಎರಡನೇ ಮಹಾಯುದ್ಧದ ದಿನಗಳವು. ಮಿಲಿಟರಿ ಕ್ಯಾಂಪ್ (ನಾಡ ಭಾಷೆಯಲ್ಲಿ ಮಿಲಿಟರಿ ಬ್ಯಾಕ್) ಕುಂಬಳೆ, ಪೆರ್ಣೆ, ಕಣ್ಣೂರು, ಸೀತಂಗೋಳಿ ನಾಯ್ಕಾಪು, ಅನಂತಪುರ ಗಳಲ್ಲಿತ್ತು. ಆದ್ದರಿಂದ ನಮ್ಮೂರಿನಲ್ಲಿ ನಮಗಿರಲು ಸಾಧ್ಯವಿರಲಿಲ್ಲ. ನಮ್ಮ ಮನೆಯನ್ನು ಮಿಲಿಟರಿಯವರು ತಮ್ಮದನ್ನಾಗಿಸಿಕೊಂಡಿದ್ದರು. ನನ್ನ ಹಿರಿಯರನ್ನು ಅನಂತಪುರದಲ್ಲಿ ನೆಲೆಸಲು 'ಮಿಲಿಟರಿ' ಅನುವು ಮಾಡಿ ಕೊಟ್ಟಿರಲಿಲ್ಲ. ಹಾಗಾಗಿ ನನ್ನವರು ಪಕ್ಕದ 'ಮಧೂರು' ಗ್ರಾಮಕ್ಕೆ ಹೋದರು. 1946ರಿಂದ 1948ರ ವರೆಗೆ ನನ್ನ ಹಿರಿಯರು ಮಧೂರು ಗ್ರಾಮ ಚಾವಡಿಯ ಪಕ್ಕದಲ್ಲಿ ಮನೆಯೊಂದನ್ನು ನಿರ್ಮಿಸಿ ವಾಸ್ತವ್ಯವನ್ನು ಹೂಡಿದ್ದರು. ನನ್ನಜ್ಜ ದಿ। ಅನಂತಪುರ ನಾರಾಯಣಯ್ಯ ಮಧೂರು ಗ್ರಾಮದ ಪಟೇಲರೂ ಆಗಿದ್ದರು.

1946ಕ್ಕಿಂತಲೂ ಮೊದಲು ನಮ್ಮೂರಿಗೆ ಅಂದೊಮ್ಮೆ ಬಂದ 'ತಹಶೀಲ್ದಾರ'ರಿಗೆ 'ಬಬಿಯ'ನನ್ನು ತೋರಿಸಲು ಕೆರೆಯತ್ತ ಅಜ್ಜ ಅವರನ್ನು ಕರೆದುಕೊಂಡು ಹೋದರು. ಒಂದು ನಿರ್ದಿಷ್ಟ ದಿಕ್ಕಿನಿಂದ ಅಜ್ಜ 'ಬಬಿಯ...' ಎಂದು ಕರೆದಾಗ ಬಂದ ಮೊಸಳೆಯನ್ನು ನೋಡಿದ ತಹಶೀಲ್ದಾರರು ಬಹುಶಃ ಅಭ್ಯಾಸ ಬಲದಿಂದ ಬಂದಿರುವ ಸಾಧ್ಯತೆ ಇರಬಹುದೆಂದೂ, ಬೇರೆ ಬೇರೆ ದಿಕ್ಕುಗಳಿಂದ ಕರೆಯಿರಿ ಎಂದು ಅಜ್ಜನ ಬಳಿ ಕೇಳಿಕೊಂಡರು. ಅದರಂತೆ ನಾಲ್ಕು ದಿಕ್ಕುಗಳಿಂದಲೂ ಅಜ್ಜ 'ಬಬಿಯ'... ಎಂದು ಕೂಗಿದಾಗಲೂ 'ಬಬಿಯ' ಬರುವುದನ್ನು ಕಂಡ ತಹಶೀಲ್ದಾರರಿಗೆ ಇದು ಅಭ್ಯಾಸ ಬಲದಿಂದಲ್ಲ ಎನ್ನುವುದು ಖಚಿತವಾಗಿ 'ಕರೆದಾಗ ಬರುವ ಮೊಸಳೆ'ಯೆಂದು ಅವರಿಗೆ ಮನವರಿಕೆಯಾಯಿತು. ಅನಂತರ ಅವರ ಸಮ್ಮುಖದಲ್ಲೇ ಅಜ್ಜ ಕೆಲಸದಾಳಿಗೆ ಕೋಳಿಯನ್ನು ಕೊಡಲು ಹೇಳಿದರು. ಕೆಲಸದಾಳು ಕೊಟ್ಟ ಕೋಳಿಯನ್ನು ತೆಗೆದುಕೊಂಡು 'ಬಬಿಯ' ತನ್ನ ಬಿಡಾರಕ್ಕೆ ಹೋದ ಘಟನೆಯನ್ನು ನೋಡಿ ಮೆಚ್ಚಿ ಅಜ್ಜನಿಗೆ ಅಭಿನಂದನಾ ಪತ್ರವನ್ನೂ ತಹಶೀಲ್ದಾರರು ಬರೆದಿದ್ದರು. ಕಾಲದೊಳಗೆ ಪತ್ರವುರುಳಿ ಅಜೀರ್ಣಗೊಂಡ ಪರಿಣಾಮ ಇದೀಗ ಅಭಿನಂದನಾ ಪತ್ರ ಕೇವಲ ನೆನಪು ಮಾತ್ರ.

*(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು.)*





## ಜ್ಞಾನ – ನುಡಿ

ಜಗತ್ತಿನ ಪರಮೋಚ್ಚ ಧರ್ಮವೆಂದರೆ ನಮ್ಮ ಮೂಲ ಸ್ವರೂಪದಲ್ಲಿ ಅಂತಃಸತ್ವದಲ್ಲಿ ನಂಬಿಕೆಯಿಡುವುದು. – **ಸ್ವಾಮಿ ವಿವೇಕಾನಂದ**

## ಜ್ಞಾನ – ಗಾದೆ

- ತೊಟ್ಟಿಲ್‌ತ ಬಾಲೆ ಬುಳಿಪಂತೆ ಪೇರ್ ಕೊಳಯೆರ್.
- ಸೇವುತ ಕಾರ್‌ಗ್ ಕಂಜಿ ಕಟ್ಟ್‌ತ್ ಬತ್ತಿಲೆಕ್ಕ.
- ತೀರಂತಿನಯಿನ್ ದೆರ್ತ್‌ದ್ ತಿಗಲೆಗ್ ಪಾಡೊಂಡೆ.

## ಜ್ಞಾನ – ನಗೆ

**ಗುಂಡ** : ನನ್ನ ಗೆಳೆಯನಿಗೆ ಮೊದಲು ಚಮಚ ತೊಳೆಯುವುದಕ್ಕೂ ಬರುತ್ತಿರಲಿಲ್ಲ. ಅದಕ್ಕೇ ಮದುವೆಯಾಗು ಸರಿಯಾಗುತ್ತೆ ಅಂತ ಹೇಳಿದ್ದೆ.

**ತಿಮ್ಮ** : ಈಗ ಅವನಿಗೆ ಚಮಚ ತೊಳೆಯಲು ಬರುತ್ತಾ?

**ಗುಂಡ** : ಈಗ ಅವನು ಪಾತ್ರೆ, ಬಟ್ಟೆಗಳನ್ನೆಲ್ಲಾ ತೊಳೆಯುತ್ತಾನೆ ಅಂದ್ರೆ ನಂಬಲೂ ಆಗುತ್ತಿಲ್ಲ!

## ಜ್ಞಾನ – ವಿಸ್ಮಯ

ಆಫ್ರಿಕಾ ಖಂಡದಲ್ಲಿ ಕಂಡುಬರುವ 'ಬವೋಬಾಬ್' ಹೆಸರಿನ ಮರಗಳದ್ದು ಸಾವಿರಾರು ವರ್ಷಗಳ ದೀರ್ಘಾಯುಷ್ಯ. ಜಿಂಬಾಬ್ವೆಯಲ್ಲಿದ್ದ 'ಪಾಂಕೆ ಬವೋಬಾಬ್' ಮರ 2011ರಲ್ಲಿ ಸತ್ತಾಗ, ಅದರ ವಯಸ್ಸು ಬರೋಬ್ಬರಿ 2450 ವರ್ಷ!

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3
Editor : Sri M. S. Raghunath Rao, Darbe, Puttur
Printed at : Rajesh Power Press, Darbe - 574 202, Puttur, D. K.